ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜುಲೈ 04, 2024

ಸಂಪುಟ : 51 ಸಂಚಿಕೆ : 51 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಮತ್ತೆ ಸಿಎಂ ಗಾದಿಗೆ ಹೇಮಂತ್ ಸೋರೇನ್

ರಾಂಚಿ, ಜು. 3 - ಜಾರ್ಖಂಡ್ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು ಬುಧವಾರ ರಾಜೀನಾಮೆ ನೀಡಿದ್ದಾರೆ. ಅಕ್ರಮ ಹಣ ಪ್ರಕರಣದಲ್ಲಿ ಜಾಮೀನಿನ ಮೇಲೆ ಹೊರಗಿರುವ ಹೇಮಂತ್ ಸೊರೇನ್ ಅವರು ಸರ್ಕಾರ ರಚಿಸಲು ಅನುಮತಿ ಕೋರಿದ್ದಾರೆ.

ಜೆಎಂಎಂ ನೇತೃತ್ವದ ಮೈತ್ರಿ ಕೂಟ ಇದಕ್ಕೂ ಮುಂಚೆ ಸಭೆ ನಡೆಸಿ ಸರ್ವ ಸಮ್ಮತಿಯಿಂದ ಹೇಮಂತ್ ಅವರನ್ನು ಮುಖ್ಯ ಮಂತ್ರಿ ಮಾಡಲು ತೀರ್ಮಾನ ತೆಗೆದುಕೊಂಡಿತ್ತು.

ಹೇಮಂತ್ ಅವರನ್ನು ಅಕ್ರಮ ಹಣ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಬಂಧಿಸಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಫೆಬ್ರವರಿಯಲ್ಲಿ ಚಂಪೈ ಸೊರೇನ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಹೇಮಂತ್ ಜಾಮೀನು ಪಡೆದು ಹೊರ ಬಂದ ಬೆನ್ನಲ್ಲೇ, ಅಧಿಕಾರ ಬದಲಾವಣೆಯಾಗುತ್ತಿದೆ.

ರಾಜ್ಯಪಾಲ ಸಿ.ಪಿ. ರಾಧಾ ಕೃಷ್ಣನ್ ಅವರನ್ನು ಭೇಟಿ ಮಾಡಿ ಚಂಪೈ ಸೊರೇನ್ ರಾಜೀನಾಮೆ ಸಲ್ಲಿಸಿದ್ದಾರೆ. ಹೇಮಂತ್ ಸೊರೇನ್ ಅವ ರು ಸರ್ಕಾರ ರಚಿಸಲು ಅನುಮತಿ ಕೋರಿದ್ದು, ಶೀಘ್ರದಲ್ಲೇ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಹೇಮಂತ್ ಸೊರೇನ್ ಅವರು ಜಾರ್ಖಂಡ್13ನೇಮುಖ್ಯಮಂತ್ರಿಯಾಗಲಿದ್ದಾರೆ.

**ಅಕ್ರಮ ಹಣ ಪ್ರಕರಣದಲ್ಲಿ ಜಾಮೀನು ಪಡೆದು ಹೊರ ಬಂದ ಬೆನ್ನಲ್ಲೇ ಸರ್ಕಾರ ರಚಿಸಲು ಅನುಮತಿ ಕೋರಿದ ಹೇಮಂತ್ ಸೊರೇನ್**



ಗುರುವಾರ ಬೆಳಗ್ಗೆ 11 ಗಂಟೆಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎಂದು ಕಾಂಗ್ರೆಸ್ ಶಾಸಕರೊಬ್ಬರು ತಿಳಿಸಿದ್ದಾರೆ.

ರಾಜಭವನದಿಂದ ಹೊರಬಂದ ನಂತರ ಮಾತನಾಡಿರುವ ಚಂಪೈ ಸೊರೇನ್, ಜೆಎಂಎಂ ನೇತೃತ್ವದ ಮೈತ್ರಿಕೂಟದ ನಿರ್ಧಾರದಂತೆ ನಾನು ರಾಜೀನಾಮೆ ನೀಡಿದ್ದೇನೆ. ನಮ್ಮ ಮೈತ್ರಿಕೂಟ ಬಲವಾಗಿದೆ ಎಂದು ತಿಳಿಸಿದ್ದಾರೆ.


ಹೇಮಂತ್ ಸೊರೇನ್ ಅವರ ಜೊತೆ ಯಾವ ರೀತಿ ನಡೆದುಕೊಳ್ಳಲಾಗಿತ್ತು ಎಂಬುದು ನಮಗೆಲ್ಲರಿಗೂ ಗೊತ್ತೇ ಇದೆ. ನನಗೆ ಮೈತ್ರಿಕೂಟದ ಪಕ್ಷಗಳು ಜವಾಬ್ದಾರಿ ನೀಡಿದ್ದವು. ಈಗ ಮೈತ್ರಿಕೂಟ ಹೇಮಂತ್ ಸುರೇನ್ ಅವರ ಪರವಾಗಿ ನಿರ್ಧಾರ ತೆಗೆದುಕೊಂಡಿದೆ ಎಂದು ಹೇಳಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಹೇಮಂತ್ ಸೊರೇನ್ ಸರ್ಕಾರ ರಚಿಸುವ ಎಲ್ಲಾ ಔಪಚಾರಿಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗಿದೆ ಎಂದಿದ್ದಾರೆ. (2ನೇ ಪುಟಕ್ಕೆ)

## ಸಿಎಂ ಹುದ್ದೆಗೆ ಖರ್ಗೆ ನೇಮಕ ?

### ಡಿಕೆಶಿ-ಸಿದ್ದರಾಮಯ್ಯ ಸಂಘರ್ಷ ಶಮನಕ್ಕೆ ಹೈಕಮಾಂಡ್ ಸೂತ್ರ ಸಾಧ್ಯತೆ

ಬೆಂಗಳೂರು, ಜು. 3 - ನಾಯಕತ್ವಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಕಚ್ಚಾಟ ಶಮನ ಮಾಡಲು ಕಾಂಗ್ರೆಸ್ ವರಿಷ್ಠರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನೇ ಕರ್ನಾಟಕ ರಾಜಕಾರಣಕ್ಕೆ ಇಳಿಸಲು ಸಿದ್ಧತೆ ನಡೆದಿದೆ ಎನ್ನಲಾಗುತ್ತಿದೆ.



ಕರ್ನಾಟಕ ಕಾಂಗ್ರೆಸ್ ಅನ್ನು ಆಪರೇಷನ್ ಕಮಲದಿಂದ ಪಾರು ಮಾಡುವುದು ಹಾಗೂ ಕೆಪಿಸಿಸಿಯಲ್ಲಿನ ಆಂತರಿಕ ಕಚ್ಚಾಟಕ್ಕೆ ತೆರೆ ಎಳೆಯಲು ಖರ್ಗೆ ಅವರನ್ನು ಸಿದ್ದರಾಮಯ್ಯ ನಂತರದ ಅವಧಿಗೆ ಮುಖ್ಯಮಂತ್ರಿಯನ್ನಾಗಿ ಮಾಡಲು ವರಿಷ್ಠರು ಮುಂದಾಗಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಇಂತಹ ಸಂದರ್ಭದಲ್ಲಿ ಶಿವ ಕುಮಾರ್ ಉಪಮುಖ್ಯಮಂತ್ರಿಯಾಗೇ ಮುಂದುವರೆಯುತ್ತಾರೆ, ಅವರ ಜೊತೆಗೆ ಎಂ.ಬಿ.ಪಾಟೀಲ್ ಅವರಿಗೂ ಸಚಿವ ಸ್ಥಾನದಿಂದ ಬಡ್ತಿ ದೊರೆಯಲಿದೆ. ಅಧಿಕಾರದಿಂದ ಕೆಳಗಿಳಿಯುವ ಸಿದ್ದರಾಮಯ್ಯ ಅವರಿಗೆ ಕೆಪಿಸಿಸಿ ಅಧ್ಯಕ್ಷ ಹುದ್ದೆ ಇಲ್ಲವೇ ರಾಷ್ಟ್ರೀಯ ರಾಜಕಾರಣಕ್ಕೆ ನಿಯೋಜಿಸಲಿದ್ದಾರೆ ಎಂಬ ಮಾತು ಕಾಂಗ್ರೆಸ್ ವಲಯದಲ್ಲಿ ದಟ್ಟವಾಗಿ ಹಬ್ಬಿದೆ.

ಕಾಂಗ್ರೆಸ್ ಮೂಲ ಮಂತ್ರದಂತೆ ಒಬ್ಬ ವ್ಯಕ್ತಿಗೆ ಒಂದು ಹುದ್ದೆ, ಇದರನ್ವಯ ಖರ್ಗೆ ಅವರು ಎಐಸಿಸಿ ಅಧ್ಯಕ್ಷ ಸ್ಥಾನ ಇಲ್ಲವೇ ರಾಜ್ಯಸಭೆಯ ಪ್ರತಿಪಕ್ಷ ಸ್ಥಾನದಿಂದ ಕೆಳಗಿಳಿಯಬೇಕಾಗುತ್ತದೆ.

ಇಂದಿರಾ ಗಾಂಧಿ ಕುಟುಂಬಕ್ಕೆ ಅತ್ಯಂತ ನಿಷ್ಠರಾಗಿರುವ ಖರ್ಗೆ ಅವರನ್ನು ಒಂದು ಬಾರಿಯಾದರೂ ಮುಖ್ಯಮಂತ್ರಿ ಮಾಡಬೇಕೆಂದು ಪಕ್ಷದ ಅಧಿನಾಯಕರಾಗಿರುವ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಆಸಕ್ತಿ ಹೊಂದಿದ್ದಾರೆ.

ತಾವು ತೆಗೆದುಕೊಂಡ ನಿರ್ಧಾರವನ್ನು ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರಿಗೆ ಇತ್ತೀಚೆಗೆ ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಗಮನಕ್ಕೆ ತಂದಿದ್ದಾರೆ ಮತ್ತು ಖರ್ಗೆ ಅವರಿಗೆ ಒಮ್ಮೆ ಅವಕಾಶ ಮಾಡಿಕೊಡಿ ಎಂದು ಸಲಹೆ ಮಾಡಿದ್ದಾರೆ.

ಈ ಬೆಳವಣಿಗೆ ನಂತರ ಶಿವಕುಮಾರ್ ದೆಹಲಿಯಿಂದ ನಗರಕ್ಕೆ ಹಿಂತಿರುಗಿದವರು ಮತ್ತೆ ದೆಹಲಿಗೆ ತೆರಳಿ ಖರ್ಗೆ ಅವರನ್ನು ಭೇಟಿ ಮಾಡಿ, ರಾಹುಲ್ ಪ್ರಸ್ತಾಪಿಸಿದ ವಿಷಯಕ್ಕೆ (2ನೇ ಪುಟಕ್ಕೆ)

## ಡೆಂಘಿ ಟೆಸ್ಟ್‌ಗಳಿಗೆ ದರ ನಿಗದಿ

ಬೆಂಗಳೂರು, ಜು. 3 – ಖಾಸಗಿ ಆಸ್ಪತ್ರೆಗಳು ಡೆಂಗಿ ಪತ್ತೆ ಹಚ್ಚುವ ಎಲಿಸಾ ಮತ್ತು ರ್‍ಯಾಪಿಡ್ ಟೆಸ್ಟ್‌ಗಳಿಗೆ ರಾಜ್ಯ ಸರ್ಕಾರ ದರ ನಿಗದಿ ಪಡಿಸಿದೆ.

ಎಲಿಸಾ ಪರೀಕ್ಷೆಗೆ 300 ರೂಪಾಯಿ ಹಾಗೂ ರ್‍ಯಾಪಿಡ್ ಪರೀಕ್ಷೆಗೆ 250 ರೂಪಾಯಿ ನಿಗದಿಗೊಳಿಸಲಾಗಿದ್ದು ಖಾಸಗಿ ಆಸ್ಪತ್ರೆಗಳು ಈ ಮಾರ್ಗಸೂಚಿಯನ್ನು ಅನುಸರಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ರಾಜ್ಯದಲ್ಲಿ ಡೆಂಘಿ ಹೆಚ್ಚಿರುವ ಈ ಸಂದರ್ಭದಲ್ಲಿ ಸರ್ಕಾರದೊಂದಿಗೆ ಖಾಸಗಿ ಆಸ್ಪತ್ರೆಗಳು ಕೈಜೋಡಿಸಬೇಕು ಎಂದವರು ಹೇಳಿದ್ದಾರೆ.

## ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕರಾಗಿ ರಮೇಶ್



ಬೆಂಗಳೂರು, ಜು.3- ದಾವಣಗೆರೆ ವ್ಯಾಪ್ತಿಯಲ್ಲಿರುವ ಪೂರ್ವ ವಲಯ ಪೊಲೀಸ್ ಮಹಾ ನಿರೀಕ್ಷಕರನ್ನಾಗಿ ಬಿ. ರಮೇಶ್ ಅವರನ್ನು ನೇಮಕ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದೆ. ಐಎಎಸ್, ಐಪಿಎಸ್, ಐಎಫ್‌ಎಸ್ ಸೇರಿದಂತೆ ಹಿರಿಯ ಅಧಿಕಾರಿಗಳ ವರ್ಗಾವರ್ಗಿ ಮಾಡಲು ಸರ್ಕಾರ ಸಿದ್ಧತೆ ಮಾಡಿಕೊಂಡಿದ್ದು, ಮೊದಲ ಭಾಗವಾಗಿ ಒಂದೇ ಹಂತದಲ್ಲಿ ಇಂದು 25 ಪೊಲೀಸ್ ಅಧಿಕಾರಿಗಳ ವರ್ಗಾವಣೆ ಮಾಡಿದೆ.

## ಅಯೋಧ್ಯೆ ರಾಮ ಮಂದಿರದ ಅರ್ಚಕರ ಸಮವಸ್ತ್ರ ಬದಲು

ಅಯೋಧ್ಯೆ, ಜು. 3 - ಇಲ್ಲಿನ ರಾಮ ಮಂದಿರದ ಅರ್ಚಕರ ಸಮವಸ್ತ್ರವನ್ನು ಬದಲಿಸಲಾಗಿದೆ. ಅವರು ದೇವಾಲಯದಲ್ಲಿ ಮೊಬೈಲ್ ಫೋನ್ ಗಳನ್ನು ತರದಂತೆ ನಿರ್ಬಂಧಿಸಲಾಗಿದೆ ಎಂದು ದೇವಾಲಯ ಟ್ರಸ್ಟ್‌ನ ಅಧಿಕಾರಿಗಳು (2ನೇ ಪುಟಕ್ಕೆ)

## ಆಹಾರ ವಲಯದಲ್ಲಿವೆ ಅವಕಾಶ





ದಾವಣಗೆರೆ, ಜು.3- ಸ್ವಾವಲಂಬಿ ಜೀವನ ಸಾಗಿಸಲು ಆಹಾರ ವಲಯದಲ್ಲಿ ಅಪಾರ ಅವಕಾಶಗಳಿದ್ದು, ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳುವಂತೆ ಬಾಪೂಜಿ ವಿದ್ಯಾಸಂಸ್ಥೆ ಹಾಗೂ ಕಾಲೇಜು ಆಡಳಿತ ಮಂಡಳಿ ಸದಸ್ಯ ಸಂಪನ್ನ ಮುತಾಲಿಕ್ ಸಲಹೆ ನೀಡಿದರು.

ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಸಾಂಸ್ಕೃತಿಕ ವೇದಿಕೆ, ರಾಷ್ಟ್ರೀಯ ಸೇವಾ ಯೋಜನೆ, ಎನ್.ಸಿ.ಸಿ., ಯುವ ರೆಡ್‌ಕ್ರಾಸ್ ಘಟಕ ಹಾಗೂ ಕ್ರೀಡಾ ವಿಭಾಗದ ಸಂಯುಕ್ತಾಶ್ರಯದಲ್ಲಿ ಕಾಲೇಜು (2ನೇ ಪುಟಕ್ಕೆ)

**ಆಸಕ್ತಿ ಬೆಳೆಸಿಕೊಳ್ಳುವಂತೆ ಸಂಪನ್ನ ಮುತಾಲಿಕ್ ಕರೆ**

## ಕುಡಿಯುವ ನೀರಿನ ವ್ಯತ್ಯಯವಾದರೆ ಅಧಿಕಾರಿಗಳೇ ಹೊಣೆ : ಸಿಎಂ

ಬೆಂಗಳೂರು, ಜು. 3 - ಶುದ್ಧ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಎಚ್ಚರಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 'ಭೂ ಪರಿವರ್ತನೆ ಮತ್ತು ಒಣಭೂಮಿ ನಿರ್ವಹಣೆ' ಕಾರ್ಯಕ್ರಮ ಉದ್ಘಾಟಿಸಿ, ರಾಜ್ಯ ಪರಿಸರ ಪ್ರಶಸ್ತಿ (2ನೇ ಪುಟಕ್ಕೆ)

## ಹತ್ರಾಸ್ ಕಾಲ್ತುಳಿತದ ನ್ಯಾಯಾಂಗ ತನಿಖೆ

ಹತ್ರಾಸ್, ಜು. 3 - ಉತ್ತರ ಪ್ರದೇಶ 121 ಜನರ ಸಾವಿಗೆ ಕಾರಣವಾದ ಹತ್ರಾಸ್ ಕಾಲ್ತುಳಿತ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸುವುದಾಗಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಘೋಷಿಸಿದ್ದಾರೆ. (2ನೇ ಪುಟಕ್ಕೆ)

## ದೂಡಾ ಆಯುಕ್ತರಾಗಿ ಹುಲ್ಲುಮನಿ ತಿಮ್ಮಣ್ಣ



ದಾವಣಗೆರೆ, ಜು. 3- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರನ್ನಾಗಿ ಕಿರಿಯ ಶ್ರೇಣಿ (2ನೇ ಪುಟಕ್ಕೆ)






# ಮಾದಕ ದ್ರವ್ಯ ಸೇವನೆ ದೇಶದ ಅತಿ ದೊಡ್ಡ ಪಿಡುಗು

## ಹರಪನಹಳ್ಳಿಯ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಎಚ್.ಬಿ.ಮಂಜುನಾಥ್



ಹರಪನಹಳ್ಳಿ, ಜು. 3- ಮಾದಕ ದ್ರವ್ಯ ಸೇವನೆ ನಮ್ಮ ದೇಶದ ಅತೀ ದೊಡ್ಡ ಪಿಡುಗು. ಈ ಪಿಡುಗನ್ನು ತಳ ಮಟ್ಟದಿಂದ ತೊಡೆದು ಹಾಕುವ ಪ್ರಯತ್ನ ನಡೆಯಬೇಕು ಎಂದು ದಾವಣಗೆರೆಯ ವ್ಯಂಗ್ಯ ಚಿತ್ರಕಾರ ಎಚ್.ಬಿ.ಮಂಜುನಾಥ್ ಹೇಳಿದರು.

ಇಲ್ಲಿನ ಪಟ್ಟಣದ ಸರ್ಕಾರಿ ಪದವಿ ಕಾಲೇಜು ಆವರಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ ಟ್ರಸ್ಟ್ ಹರಪನಹಳ್ಳಿ ವಲಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಂಯುಕ್ತ ಆಶ್ರಯ ದಲ್ಲಿ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮದು ಯುವಕರ ದೇಶ. ಅನ್ಯರೂ ಹೊಟ್ಟೆಕಿಚ್ಚು ಪಟ್ಟುಕೊಳ್ಳುವಷ್ಟು ಯುವ ಸಮೂಹ ನಮ್ಮಲ್ಲಿದೆ. ದೇಶದ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಯುವಕರೇ ತುಂಬಿದ್ದಾರೆ. ಅದರೆ ಮಾದಕ ವ್ಯಸನಕ್ಕೆ ಸಿಲುಕಿ ಶೇ. ಐವತ್ತಕ್ಕೂ ಹೆಚ್ಚು ಯುವಕರೇ ಬಲಿಯಾಗುತ್ತಿರುವುದು ದುರ್ದೈವದ ಸಂಗತಿ ಎಂದರು.

ಸಂಪೂನ್ಮಲ ವ್ಯಕ್ತಿ ಕುಸುಮ ಜಗದೀಶ ಮಾತನಾಡಿ ಮದ್ಯಪಾನ, ಧೂಮಪಾನದಂತಹ ದುಶ್ಚಟಗಳಿಗೆ ಹದಿಹರೆಯದ ವಯಸ್ಸಿನವರು ಒಳಗಾಗುತ್ತಾರೆ. ಒಮ್ಮೆ ಮಾದಕ ವಸ್ತುಗಳ ಸೇವನೆಗೆ ಒಳಗಾದರೆ, ಅದರಿಂದ ಹೊರಬರುವುದು ತುಂಬಾ ಕಷ್ಟ ಎಂಬುದನ್ನು ತಿಳಿಹೇಳಬೇಕಿದೆ. ಚಿಕ್ಕಂದಿನಲ್ಲೇ ಗುರು–ಹಿರಿಯರು ಮಾರ್ಗದರ್ಶನ ನೀಡಬೇಕಿದೆ ಎಂದರು.

ಮಾನವ ವ್ಯವಸ್ಥೆಯೊಂದು ಅದ್ಭುತವಾದ ರಾಸಾಯನಿಕ ಕಾರ್ಖಾನೆ. ನಿಮಗೆ ನಶೆ ಬೇಕಿದ್ದರೆ, ಒಳಗಿನಿಂದಲೇ ಅದನ್ನು ಸೃಷ್ಟಿಸಬಹುದು. ನಿಮಗೆ ಅಮಲು ಹಾಗೂ ಪೂರ್ತಿ ಜಾಗೃತಿ, ಇವೆರಡೂ ಒಂದೇ ಸಮಯದಲ್ಲಿ ಇರುವಂತಹ ನಶೆ. ಈ ರೀತಿಯಾದ ನಶೆಯನ್ನು ನಮ್ಮ ಮಕ್ಕಳಿಗೆ ಮತ್ತು ಯುವಜನರಿಗೆ ಪರಿಚಯಿಸಬೇಕು. ಇದಕ್ಕಾಗಿಯೇ ಎಲ್ಲರ ಜೀವನದಲ್ಲೂ ಯೋಗ ತಂತ್ರಜ್ಞಾನವನ್ನು ತರುವುದಕ್ಕೆ ನಾವು ಪ್ರಯತ್ನಿಸುತ್ತಿರುವುದು. ನಿಮ್ಮೊಳಗೆ ನೀವು ಕೆಲವು ಸ್ಥಿತಿಗಳನ್ನು ಹೊಂದಿದಾಗ ಯಾವ ತರಹದ ನಶೆ ಸಿಗುತ್ತದೆಂದರೆ, ಅದು ಯಾವುದೇ ಡ್ರಗ್ಸ್ ಅಥವಾ ಡ್ರಿಂಕ್ಸ್‌ನಲ್ಲೂ ಸಿಗುವುದಿಲ್ಲ. ಹಾಗಿದ್ದರೂ, ಅದೇ ಸಮಯದಲ್ಲಿ, ನೀವು ಸಂಪೂರ್ಣವಾಗಿ ಜಾಗೃತರಾಗಿ ರುತ್ತೀರಿ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಪದವಿ ಕಾಲೇಜು ಪ್ರಾಂಶುಪಾಲ ಡಾ. ಎಸ್. ಷಣ್ಮುಖನ ಗೌಡ ಮಾತನಾಡಿ, ಮಾದಕ ದ್ರವ್ಯ ಇಡೀ ಸಮಾಜವನ್ನೇ ಹಾಳು ಮಾಡುತ್ತಿದೆ. ಮಕ್ಕಳು ಮಾದಕ ದ್ರವ್ಯ ಸೇವನೆಯಿಂದ ದೂರ ವಿರುವಂತೆ ಕಾಳಜಿ ವಹಿಸಬೇಕು.

ದುಶ್ಚಟಗಳು ವ್ಯಕ್ತಿಯ ಬದುಕು, ಕುಟುಂಬ ಮಾತ್ರವಲ್ಲದೆ ಸಮಾಜದ ಮೇಲೂ ನೇರ ಪರಿಣಾಮ ಬೀರುತ್ತದೆ. ಮಾದಕ ವಸ್ತು ಸೇವನೆಯಿಂದ ವ್ಯಕ್ತಿಯ ಮೆದುಳು, ದೈಹಿಕ, ಮಾನಸಿಕ ಆರೋಗ್ಯ ಹಾಗೂ ಸಾಮಾಜಿಕ ಬದುಕಿಗೂ ಮಾರಕವಾಗಿದೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಬಾಬು, ಮೇಲ್ವಿಚಾರಕರಾದ ಅರ್ಪಿತ, ಧರ್ಮಸ್ಥಳ ಸಂಸ್ಥೆಯ ವಿಜಯಲಕ್ಷ್ಮಿ, ರೂಪ, ಜ್ಯೋತಿ, ಉಪ ನ್ಯಾಸಕ ಎನ್.ಎಂ.ನಾಗರಾಜ, ಉಚ್ಚರಾಯಪ್ಪ, ಶಂಭುಲಿಂಗಪ್ಪ ಕಾಯಕದ, ಪುನೀತರಾಜ್ ಸೇರಿದಂತೆ ಇತರರು ಇದ್ದರು.

# ಕಾಯಕದಲ್ಲಿ ಶ್ರದ್ಧೆ, ನಿಷ್ಠೆ ಇದ್ದಾಗ ಸುಖ, ಶಾಂತಿ

## ಕಣಕುಪ್ಪಿ ಗವಿಮಠದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ



ಹರಿಹರ

ಹರಿಹರ, ಜು.3- ನಾವು ಮಾಡುವಂತಹ ಕಾಯಕದಲ್ಲಿ ಶ್ರದ್ಧೆ, ಭಕ್ತಿ, ನಿಷ್ಠೆ, ತ್ಯಾಗ, ಸದಾಚಾರ, ಸದ್ಭಾವನಾ ಗುಣಗಳು ಇದ್ದಾಗ, ಭಗವಂತನು ನಮಗೆ ಆಶೀರ್ವಾದದ ರೂಪದಲ್ಲಿ ಬೇಡಿದ ಫಲಗಳನ್ನು ನೀಡುತ್ತಾನೆ ಎಂದು ಕಣಕುಪ್ಪಿ ಗವಿಮಠದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಹೊರವಲಯದ ಮಾಕನೂರು ಕ್ರಾಸ್ ಬಳಿ ರಾಣೇಬೆನ್ನೂರಿನ ಮಾಜಿ ಶಾಸಕ ಅರುಣಕುಮಾರ್ ಪೂಜಾರ್ ಮತ್ತು ಸಹೋದರರ ಎಂ.ಎಂ.ಪಿ ಬ್ರಿಕ್ಸ್ ಕಂಪನಿಯ ಪ್ರಾರಂಭೋತ್ಸವ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮನೆಗಳಲ್ಲಿ ಪ್ರತಿಯೊಬ್ಬರೂ ಪೂಜೆ, ಧ್ಯಾನ, ಧರ್ಮ ಕಾರ್ಯ ಮಾಡುತ್ತಾ ಬಂದಾಗ, ಎಲ್ಲಾ ಕೆಲಸಗಳಲ್ಲಿ ಯಶಸ್ಸು ಲಭಿಸುತ್ತವೆ. ಮನುಷ್ಯನಿಗೆ ಭಕ್ತಿ ಭಾವ ಬರಬೇಕಾದರೆ, ಪೂರ್ವಜರು ಮಾಡಿದ ಪುಣ್ಯ ಕೆಲಸಗಳಿಂದ ಮತ್ತು ನಾವು ಮಾಡುವಂತಹ ಎಲ್ಲಾ ಕೆಲಸಗಳಲ್ಲಿ ಸುಕೃತ ಮನಸ್ಸು ಇದ್ದಾಗ ಯಶಸ್ಸು ಕಾಣಲಿಕ್ಕೆ ಸಾಧ್ಯವಾಗುತ್ತದೆ ಎಂದು ಶ್ರೀಗಳು ಪ್ರತಿಪಾದಿಸಿದರು.

ಮನುಷ್ಯನಿಗೆ ಒಳ್ಳೆಯ ಸದ್ಗುಣ, ಸಂಸ್ಕಾರ ಹಾಗೂ ಭಾವನಾತ್ಮಕ ಭಾವನೆಗಳ ಜೊತೆಗೆ ಬುದ್ಧಿವಂತಿಕೆ ಮತ್ತು ಅಧ್ಯಾತ್ಮಿಕತೆಯ ಒಲವು ಇದ್ದಾಗ ಅಂತಹ ವ್ಯಕ್ತಿ ಸಮಾಜದಲ್ಲಿ ಎಲ್ಲರಿಂದಲೂ ಗೌರವಿಸಲ್ಪಡುವಂತ ವ್ಯಕ್ತಿಯಾಗಿ, ಯಶಸ್ವಿಯಾಗುತ್ತಾನೆ ಎಂದು ಹೇಳಿದರು.

ಮಾಜಿ ಶಾಸಕ ಅರುಣಕುಮಾರ್ ಮಾತನಾಡಿ, ಬಹಳಷ್ಟು ಸವಾಲುಗಳನ್ನು ಮತ್ತು ಸಂಕಷ್ಟದ ದಿನಗಳನ್ನು ಎದುರಿಸಿದ ಫಲವಾಗಿ ಇಂದು ನಮ್ಮ ಕನಸು ನನಸು ಮಾಡಲಿಕ್ಕೆ ಸಾಧ್ಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ. ಮಾಜಿ ಸಚಿವರಾದ ಬಿ.ಸಿ. ಪಾಟೀಲ್, ಪಿ.ಟಿ. ಪರಮೇಶ್ವರ ನಾಯ್ಕ್, ದಾವಣಗೆರೆಯ ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಹಾಗೂ ಇತರರು ಹಾಜರಿದ್ದರು.

# ಉಕ್ಕಡಗಾತ್ರಿಯಲ್ಲಿ ಜೆಸಿಬಿಯಿಂದ ರುದ್ರಭೂಮಿಯ ಸ್ವಚ್ಛತಾ ಕಾರ್ಯ



ಮಲೇಬೆನ್ನೂರು, ಜು.3- ಉಕ್ಕಡಗಾತ್ರಿ ಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ (ಸ್ಮಶಾನ) ಮುಳ್ಳು ಗಿಡಗಳು ಬೆಳೆದು ಶವ ಸಂಸ್ಕಾರಕ್ಕೆ ಅಡ್ಡಿ ಉಂಟಾಗಿತ್ತು. ಈ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಿದ್ದರೂ ಸಹ ಗಮನ ಹರಿಸದಿದ್ದಾಗ ಗ್ರಾಮದ ಯುವಕರು ಮತ್ತು ಗ್ರಾಮಸ್ಥರರು ಸೇರಿ ಜೆಸಿಬಿ ಮೂಲಕ ಸ್ಮಶಾನದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡು ಮಾದರಿಯಾಗಿದ್ದಾರೆ. ಈ ಸಂದರ್ಭದಲ್ಲಿ ಎಸ್.ಸುರೇಶ್, ಮಂಜು ದೊಡ್ಡಮನಿ, ಸಿದ್ದೇಶ್ ಪೂಜಾರ, ವಸಂತ, ನಾಗರಾಜ್ ಧೂಣಿ ಹಾಗೂ ಯುವಕರು ಈ ಕಾರ್ಯದಲ್ಲಿದ್ದರು.

# ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ



ದಾವಣಗೆರೆ, ಜು. 3- ಕ್ಷತ್ರಿಯ ಮರಾಠ ವಿದ್ಯಾ ಮತ್ತು ಕಲ್ಯಾಣಾಭಿವೃದ್ಧಿ ಟ್ರಸ್ಟ್ ವತಿಯಿಂದ 2023-24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 75 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾದ ದಾವಣಗೆರೆ ನಗರ ವ್ಯಾಪ್ತಿಯಲ್ಲಿರುವ ಕ್ಷತ್ರಿಯ ಮರಾಠ ಸಮಾಜದ ಬಡ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ನೀಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.

ಅರ್ಹ ವಿದ್ಯಾರ್ಥಿನಿಯರು ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ಅವರ ಕಚೇರಿ, ಮಂಡಿಪೇಟೆಯ ರೇಣು ಪೇಂಟ್ಸ್, ಗಡಿಯಾರ ಕಂಬದ ಹತ್ತಿರ ಇರುವ ಊರ್ವಶಿ ಗಾರ್ಮೆಂಟ್ಸ್, ದೇವರಾಜ ಅರಸು ಬಡಾವಣೆಯ ಸಾವಂತ್ ಕಾಂಪ್ಲೆಕ್ಸ್ ಇಲ್ಲಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಇದೇ ದಿನಾಂಕ 10 ರೊಳಗೆ ಸಂಘದ ಕಚೇರಿಗೆ ತಲುಪಿಸಬೇಕು.

ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು 94480 05060, 94485 89102, 94497 41211, 93425 14779.

# ಸಂತೇಬೆನ್ನೂರಿನಲ್ಲಿ ಉದ್ಯೋಗ ಮೇಳ

ದಾವಣಗೆರೆ, ಜು.3- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಇದೇ ದಿನಾಂಕ 6 ರಂದು ಬೆಳಿಗ್ಗೆ 10 ಗಂಟೆಗೆ ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಮಾಹಿತಿಗೆ: 8105122556, 9591088202, ಸಂಪರ್ಕಿಸಬಹುದೆಂದು ಉದ್ಯೋಗಾಧಿಕಾರಿ ರವೀಂದ್ರ ಡಿ.ತಿಳಿಸಿದ್ದಾರೆ.

# ಮತ್ತೆ ಸಿಎಂ ಗಾದಿಗೆ ಹೇಮಂತ್ ಸೊರೇನ್

**(1ನೇ ಪುಟದಿಂದ)** ಇದಕ್ಕೂ ಮುಂಚೆ ಮೈತ್ರಿಕೂಟದ ನಾಯಕರು ಹಾಗೂ ಶಾಸಕರು ಚಂಪೈ ಸೊರೇನ್ ಅವರ ನಿವಾಸದಲ್ಲಿ ಸಭೆ ನಡೆಸಿ, ಹೇಮಂತ್ ಸೊರೇನ್ ಅವರನ್ನು ಮುಖ್ಯಮಂತ್ರಿ ಮಾಡಲು ಸರ್ವ ಸಮ್ಮತಿಯಿಂದ ನಿರ್ಧಾರ ತೆಗೆದುಕೊಂಡಿದ್ದರು. ಸಭೆಯಲ್ಲಿ ಜಾರ್ಖಂಡ್ ಕಾಂಗ್ರೆಸ್ ಉಸ್ತುವಾರಿ ಗುಲಾಮ್ ಮಹಮ್ಮದ್ ಮೀರ್ ಹಾಗೂ ಕಾಂಗ್ರೆಸ್ ರಾಜ್ಯಾಧ್ಯಕ್ಷ ರಾಜೇಶ್ ಠಾಕೂರ್ ಅವರು ಉಪಸ್ಥಿತರಿದ್ದರು.

ಹೇಮಂತ್ ಸೊರೇನ್ ಅವರ ಸಹೋದರ ಬಸಂತ್ ಹಾಗೂ ಪತ್ನಿ ಕಲ್ಪನಾ ಸಹ ಉಪಸ್ಥಿತರಿದ್ದರು.

ಹೇಮಂತ್ ಸೊರೇನ್ ಅವರನ್ನು ಜೂನ್ 28ರಂದು ಬಂಧನದಿಂದ ಬಿಡುಗಡೆ ಮಾಡಲಾಗಿತ್ತು. ಐದು ತಿಂಗಳ ಕಾಲ ಅವರು ಬಂಧನದಲ್ಲಿದ್ದರು. ಹೈಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿತ್ತು.

ಅಕ್ರಮ ಹಣ ಪ್ರಕರಣದಲ್ಲಿ ಜಾರ್ಖಂಡ್ ಹೈಕೋರ್ಟ್ ಹೇಮಂತ್ ಸೊರೇನ್ ಅವರಿಗೆ ನೀಡಿರುವ ರಾಜೀನಾಮೆಯನ್ನು ಪ್ರಶ್ನಿಸಿ ಶೀಘ್ರದಲ್ಲೇ ಸುಪ್ರೀಂ ಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಲಾಗುವುದು ಎಂದು ಜಾರಿ ನಿರ್ದೇಶನಾಲಯದ ಮೂಲಗಳು ತಿಳಿಸಿವೆ.

ಜೂನ್ 28ರಂದು ಏಕ ಸದಸ್ಯ ಪೀಠ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಶೀಘ್ರದಲ್ಲೇ ಜಾರಿ ನಿರ್ದೇಶನಾಲಯ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಸೊರೇನ್ ಅವರು ತಪ್ಪಿತಸ್ಥರಲ್ಲ ಎಂದು ಹೈಕೋರ್ಟ್ ಜಾಮೀನು ನೀಡುವಾಗ ತಿಳಿಸಿತ್ತು.

ಈ ನಡುವೆ ಹೇಳಿಕೆ ನೀಡಿರುವ ಬಿಜೆಪಿ ಸಂಸದ ನಿಶ್ಕಾಂತ್ ದುಬೆ, ಚಂಪೈ ಸೊರೇನ್ ಅವರ ಅವಧಿ ಜಾರ್ಖಂಡ್‌ನಲ್ಲಿ ಮುಗಿದಿದೆ. ಜೆಎಂಎಂ ಕುಟುಂಬ ಆಧಾರಿತ ಪಕ್ಷವಾಗಿದೆ. ಹೊರಗಿನವರಿಗೆ ರಾಜಕೀಯ ಭವಿಷ್ಯ ಇಲ್ಲ ಎಂದಿದ್ದಾರೆ.

ಶಿಬು ಸೊರೇನ್ ಕುಟುಂಬದ ಹೊರಗಿನವರು ಕೇವಲ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸಬಹುದಷ್ಟೇ ಎಂದು ಜಾರ್ಖಂಡ್ ಬಿಜೆಪಿ ಅಧ್ಯಕ್ಷ ಬಾಬುಲಾಲ್ ಮರಾಂಡಿ ಹೇಳಿದ್ದಾರೆ.

# ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು.3- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಗಸ್ಟ್ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

# ಸಿಲಿಂಡರ್ ಸ್ಫೋಟ: ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದ ಜಿಲ್ಲಾಧಿಕಾರಿ

ದಾವಣಗೆರೆ, ಜು.3- ಇಲ್ಲಿನ ರಾಮನಗರದ ಎಸ್‌ಒಜಿ ಕಾಲೋನಿ ಮನೆಯಲ್ಲಿ ಮಂಗಳವಾರ ಅಡುಗೆ ಅನಿಲದ ಸಿಲಿಂಡರ್ ಸ್ಫೋಟದಿಂದ ಐವರು ಗಂಭೀರವಾಗಿ ಗಾಯಗೊಂಡಿದ್ದು, ಎಸ್.ಎಸ್.ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬುಧವಾರ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು.


ಒಟ್ಟು 5 ಜನರು ಚಿಕಿತ್ಸೆ ಪಡೆಯುತ್ತಿದ್ದು ವಿಶೇಷ ತಜ್ಞ ವೈದ್ಯರು ನಿಗಾವಹಿಸಿದ್ದಾರೆ. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲಾ ಗಾಯಾಳುಗಳಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಎಲ್ಲಾ ಚಿಕಿತ್ಸೆ ನೀಡಲು ತಿಳಿಸಿದರು. ಐವರಲ್ಲಿ ಲಲಿತಮ್ಮ ಎಂಬುವವರಿಗೆ ಹೆಚ್ಚಿನ ಗಾಯವಾಗಿದೆ, ಸೌಭಾಗ್ಯ, ಪಾರ್ವತಮ್ಮ ಇವರಿಗೆ ಶೇ. 50 ಕ್ಕಿಂತ ಹೆಚ್ಚು ಗಾಯವಾಗಿದೆ. ಉಳಿದ ಇಬ್ಬರಿಗೆ ಶೇ 50 ಕ್ಕಿಂತ ಕಡಿಮೆ ಇದೆ. ಗಾಯವು ನಂಜಾಗದಂತೆ ನೋಡಿಕೊಂಡು ಅತ್ಯುತ್ತಮ ಚಿಕಿತ್ಸೆ ನೀಡುವ ಮೂಲಕ ಗುಣಮುಖರಾಗುವಂತೆ ನೋಡಿಕೊಳ್ಳಲು ತಿಳಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಹಾಗೂ ಜಿಲ್ಲಾ ಸರ್ಜನ್ ಅವರು ಗಾಯಾಳುಗಳ ಬಗ್ಗೆ ನಿಗಾ ವಹಿಸಲು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಚಿಗಟೇರಿ ಆಸ್ಪತ್ರೆ ಸರ್ಜನ್ ಡಾ. ನಾಗೇಂದ್ರಪ್ಪ ಹಾಗೂ ಎಸ್.ಎಸ್. ಹೈಟೆಕ್ ಆಸ್ಪತ್ರೆ ವೈದ್ಯರು ಉಪಸ್ಥಿತರಿದ್ದರು.



# ಅಹಿಂದ ಒಕ್ಕೂಟಕ್ಕೆ ಮಾಲಾ ಆಯ್ಕೆ

ದಾವಣಗೆರೆ, ಜು.3- ದಾವಣಗೆರೆ ಉತ್ತರ



ವಿಧಾನಸಭಾ ಕ್ಷೇತ್ರದ ಅಹಿಂದ ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತರ ಒಕ್ಕೂಟದ ಅಧ್ಯಕ್ಷರಾಗಿ ಮಾಲಾ ನೇಮಕಗೊಂಡಿದ್ದಾರೆ.

# ನೀಟ್ ಪರೀಕ್ಷೆ ಅಕ್ರಮ : ತನಿಖೆಗೆ ಆಗ್ರಹ

ದಾವಣಗೆರೆ, ಜು.3- ನೀಟ್ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದು ವೇಲ್ಫೇರ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾಧ್ಯಕ್ಷ ಶಹಬಾಜ್ ಖಾನ್ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀಟ್ ಪರೀಕ್ಷೆ ಅಕ್ರಮದ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಸರಿಯಾದ ತನಿಖೆ ನಡೆಸುವ ಮೂಲಕ ಕರ್ನಾಟಕದ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಬಿ. ಸಫೂರ್, ಫರ್‌ಕುಂದ, ಮೊಹಮದ್ ಇರ್ಫಾನ್ ರಜವಿ, ಇಸೂಫ್ ಅಲಿಖಾನ್, ವಾಸೀಂ ಮತ್ತಿತರರು ಉಪಸ್ಥಿತರಿದ್ದರು.

# ಆಹಾರ ವಲಯದಲ್ಲಿವೆ ಅವಕಾಶ

**(1ನೇ ಪುಟದಿಂದ)** ಆವರಣದಲ್ಲಿ ಬುಧವಾರ 'ಎ.ಆರ್.ಜಿ. ವೈಭವ 2024' ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಆಹಾರ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ ಹಾವಳಿಯಿಂದಾಗಿ ಸಾಫ್ಟ್‌ವೇರ್ ವಲಯದಲ್ಲಿ ಉದ್ಯೋಗಾವಕಾಶಗಳು ಕಡಿತಗೊಂಡಿವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕಡಿತಗೊಳ್ಳುವ ಸಂಭವವಿದೆ. ಆದರೆ ಆಹಾರ ವಲಯದಲ್ಲಿ ಮಾತ್ರ ಎಂದಿಗೂ ಉದ್ಯೋಗಾವಕಾಶಗಳು ಇರಲಿವೆ ಎಂದರು.

ಆಹಾರ ವಲಯವು ಉತ್ಪಾದನೆ, ಸಂಸ್ಕರಣೆ, ಶೇಖರಣೆ, ಮಾರುಕಟ್ಟೆ ಹೀಗೆ ಎಲ್ಲಾ ವಿಭಾಗಗಳನ್ನೂ ಒಳಗೊಂಡಿದೆ. ವಾಣಿಜ್ಯ ವಿಭಾಗದ ವಿದ್ಯಾರ್ಥಿ ಗಳಿಗೂ ಇಲ್ಲಿ ಅವಕಾಶಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಆಹಾರ ವಲಯದತ್ತ ಆಸಕ್ತಿ ಬೆಳೆಸಿಕೊಳ್ಳುವಂತೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಫಾಸ್ಟ್ ಫುಡ್‌ಗಳ ಹಾವಳಿಯಿಂದ ಆರೋಗ್ಯದ ಮೇಲೆ ಹೆಚ್ಚು ಪರಿಣಾಮಗಳು ಉಂಟಾಗುತ್ತಿವೆ ದೇಶೀ ಆಹಾರದತ್ತ ಗಮನ ಹರಿಸಬೇಕು. ಹೆತ್ತವರು, ಅಧ್ಯಾಪಕರಿಗೆ ಗೌರವ ನೀಡಬೇಕು. ಮಾದಕ ವ್ಯಸನಗಳಿಂದ ದೂರ ಇರಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜು ಪ್ರಾಂಶುಪಾಲ ಡಾ.ಜಿ.ಬಿ. ಬೋರಯ್ಯ ಅಧ್ಯಕ್ಷತೆ ವಹಿಸಿದ್ದರು. ಪಿಯುಸಿ ಪ್ರಾಂಶುಪಾಲ ಬೊಮ್ಮಣ್ಣ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಭರತ್ ಪಿ. ನಿರೂಪಿಸಿದರು. ದೊಡ್ಡೇಶ್ ಪ್ರಾರ್ಥಿಸಿದರು. ಅನ್ನಪೂರ್ಣ ಸ್ವಾಗತಿಸಿದರು. ಸಂಧ್ಯಾ ವಂದಿಸಿದರು.

## ಬಾಯಲ್ಲಿ ನೀರು ತರಿಸಿದ ಮಿರ್ಚಿ-ಮಂಡಕ್ಕಿ

12 ಸ್ಟಾಲ್‌ಗಳಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಹಾರ ಮೇಳದಲ್ಲಿ ಭಾಗವಹಿಸಿದ್ದು.

ವಿದ್ಯಾರ್ಥಿನಿಯರು ಸ್ಥಳದಲ್ಲಿಯೇ ಬಾಣಲೆಯಲ್ಲಿ ಬಿಸಿ ಬಿಸಿ ಮಿರ್ಚಿ ತಯಾರಿಸಿ ಗಮನ ಸೆಳೆದರು. ಬಾಯಲ್ಲಿ ನೀರು ತರಿಸುವ ಹಲವು ಬಗೆಯ ಖಾದ್ಯಗಳು ಮೇಳದಲ್ಲಿದ್ದವು. ದಾವಣಗೆರೆ ಸ್ಪೆಷಲ್ ಮಿರ್ಚಿ ಮಂಡಕ್ಕಿ, ಮಸಾಲಾ ಮಿರ್ಚಿ, ಗಿರ್ಮಿಟ್, ಪಾನಿಪುರಿ, ರೊಟ್ಟಿ, ಪಲ್ಯ, ಹೋಳಿಗೆ ಸೀಕರಣೆ, ಚಿತ್ರಾನ್ನ, ಮಜ್ಜಿಗೆ, ಫ್ರೈಡ್ ರೈಸ್, ರಾಗಿ ಹಲ್ವಾ, ದೂದ್ ಪೇಡಾ, ಪೇಪರ್ ಅವಲಕ್ಕಿ, ಸ್ವಿಟ್ ಕಾರ್ನ್, ಫ್ರೂಟ್ ಸಲಾಡ್, ಮಸಾಲ ಮಂಡಕ್ಕಿ, ಚಹಾ, ಬೀಡ, ಸೋಡಾ ಹೀಗೆ ಹಲವು ಬಗೆಯ ಖಾದ್ಯಗಳನ್ನು ವಿದ್ಯಾರ್ಥಿಗಳು ಆಹಾರ ಮೇಳದಲ್ಲಿ ಪ್ರಸ್ತುತ ಪಡಿಸಿದರು.

# ಸಿಎಂ ಹುದ್ದೆಗೆ ಖರ್ಗೆ ನೇಮಕ?

**(1ನೇ ಪುಟದಿಂದ)** ಸಂಬಂಧಿಸಿದಂತೆ ಸುದೀರ್ಘ ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ. ರಾಹುಲ್ ತೆಗೆದುಕೊಂಡಿರುವ ನಿರ್ಧಾರವನ್ನು ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ ಪ್ರಶ್ನೆ ಮಾಡುವುದಿಲ್ಲ, ಅವರ ಬಗ್ಗೆ ಮುಖ್ಯಮಂತ್ರಿ ಅವರಿಗೆ ಬಹಳ ಅಭಿಮಾನವಿದೆ.

ಎರಡು ಬಾರಿ ಮುಖ್ಯಮಂತ್ರಿ ಆಗುವುದರ ಜೊತೆಗೆ ವಿಧಾನಸಭೆಯ ಪ್ರತಿಪಕ್ಷದ ನಾಯಕನಾಗಿ ಕೆಲಸ ಮಾಡಲು ರಾಹುಲ್ ಅವರೇ ಕಾರಣ ಎಂಬ ಗೌರವ ಸಿದ್ದರಾಮಯ್ಯ ಅವರಲ್ಲಿದೆ.

ಈ ಕಾರಣಕ್ಕಾಗಿ ರಾಹುಲ್ ಸೂತ್ರಕ್ಕೆ ಸಂಪೂರ್ಣ ಸಹಮತ ವ್ಯಕ್ತಪಡಿಸಿದ್ದಾರೆ. ಜೊತೆಗೆ ಒಬ್ಬ ದಲಿತ ನಾಯಕನಿಗೆ ಅಧಿಕಾರ ಬಿಟ್ಟುಕೊಟ್ಟೆ ಎಂಬ ಹೆಗ್ಗಳಿಕೆಗೂ ಪಾತ್ರರಾಗುತ್ತಾರೆ.

ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡುವುದರಿಂದ ಕಾಂಗ್ರೆಸ್‌ಗೆ ರಾಷ್ಟ್ರಮಟ್ಟದಲ್ಲಿ ದಲಿತ ನಾಯಕನೊಬ್ಬನನ್ನು ಮುಖ್ಯಮಂತ್ರಿ ಮಾಡಿದ ಕೀರ್ತಿ ಒಂದೆಡೆಯಾದರೆ, ಮತ್ತೊಂದೆಡೆ ಅವರ ಸರ್ಕಾರವನ್ನು ಉರುಳಿಸಲು ಪಕ್ಷದಲ್ಲಿ ಆಂತರಿಕವಾಗಿ ಇಲ್ಲವೇ ಬಾಹ್ಯವಾಗಿ ಯಾರೂ ಪ್ರಯತ್ನ ಮಾಡುವುದಿಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಪೂರ್ಣಾವಧಿಗೆ ಅಧಿಕಾರ ನಡೆಸಲಿದೆ ಎಂಬ ಎಲ್ಲಾ ಲೆಕ್ಕಾಚಾರದಿಂದ ಹಾಗೂ ಖರ್ಗೆ ಅವರಿಗೆ ಒಂದು ಅವಕಾಶ ನೀಡಲು ಸೋನಿಯಾ ಮತ್ತು ರಾಹುಲ್ ಈ ತೀರ್ಮಾನ ಕೈಗೊಂಡಿದ್ದಾರೆಂದು ಹೇಳಲಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಲೋಕಸಭಾ ಚುನಾವಣೆಯಲ್ಲಿ ಖರ್ಗೆ ಪ್ರತಿನಿಧಿಸುವ ಕಲ್ಯಾಣ ಕರ್ನಾಟಕದ ಐದೂ ಕ್ಷೇತ್ರಗಳು ಕಾಂಗ್ರೆಸ್ ಮಡಿಲಿಗೆ ಬಂದಿವೆ. ಇದೂ ಕೂಡ ಅವರಿಗೆ ಕರ್ನಾಟಕದಲ್ಲಿ ಅಧಿಕಾರ ದೊರಕಿಸಲು ಕಾರಣಗಳಲ್ಲಿ ಒಂದಾಗಿದೆ ಎಂದು ಮೂಲಗಳು ತಿಳಿಸಿವೆ.

# ಅರ್ಚಕರ ಸಮವಸ್ತ್ರ ಬದಲು

**(1ನೇ ಪುಟದಿಂದ)** ಹೇಳಿದ್ದಾರೆ.

ಇದುವರೆಗೂ ಗರ್ಭಗುಡಿಯಲ್ಲಿ ಸೇವೆ ಸಲ್ಲಿಸಿರುವ ಪೂಜಾರಿಗಳು ಕೇಸರಿ ಬಟ್ಟೆಗಳನ್ನು ಧರಿಸುತ್ತಿದ್ದರು. ಇನ್ನು ಮುಂದೆ ಅವರು ಪೀತಾಂಬರಿ ಬಣ್ಣದ ಧೋತಿ, ಕುರ್ತ ಹಾಗೂ ಪೇಟವನ್ನು ಧರಿಸಲಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಜುಲೈ ಒಂದರಿಂದ ಹೊಸ ವಸ್ತ್ರ ಸಂಹಿತೆ ಜಾರಿಗೆ ಬಂದಿದೆ.

# ದೂಡಾ ಆಯುಕ್ತರಾಗಿ ಹುಲ್ಲುಮನಿ ತಿಮ್ಮಣ್ಣ

**(1ನೇ ಪುಟದಿಂದ)** ಕೆಎಎಸ್ ಅಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರನ್ನು ಸರ್ಕಾರ ನಿಯುಕ್ತಿಗೊಳಿಸಿದೆ. ಈ ಹಿಂದೆ ಈ ಪ್ರಾಧಿಕಾರಕ್ಕೆ ಬಸವನಗೌಡ ಕೋಟೂರು ಆಯುಕ್ತರಾಗಿದ್ದರು.

# ಹತ್ರಾಸ್ ಕಾಲ್ತುಳಿತದ ನ್ಯಾಯಾಂಗ ತನಿಖೆ

**(1ನೇ ಪುಟದಿಂದ)** ಮೃತರಲ್ಲಿ ಆರು ಜನರು ಹೊರ ರಾಜ್ಯಗಳಿಗೆ ಸೇರಿದವರು. ನಾಲ್ವರು ಹರಿಯಾಣ ಹಾಗೂ ತಲಾ ಒಬ್ಬರು ಮಧ್ಯಪ್ರದೇಶ ಮತ್ತು ರಾಜಸ್ಥಾನಕ್ಕೆ ಸೇರಿದವರು ಎಂದವರು ಹೇಳಿದರು.

ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಸಹ ಭಾಗಿಯಾಗಲಿದ್ದಾರೆ. ಈ ಸಮಿತಿಯು ದುರಂತಕ್ಕೆ ಕಾರಣವೇನು ಎಂಬುದನ್ನು ಪತ್ತೆ ಮಾಡಲಿದೆ. ಈ ಘಟನೆಯಲ್ಲಿ ಸಂಚಿನ ಪಾತ್ರವಿದೆಯೇ ಎಂಬುದನ್ನು ಪತ್ತೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಈ ರೀತಿಯ ಘಟನೆ ಮುಂದೆ ಮತ್ತೆ ನಡೆಯದಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಸಮಾರಂಭಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗಸೂಚಿಯನ್ನು ಸಹ ಸರ್ಕಾರ ರೂಪಿಸಲಿದೆ ಎಂದವರು ಹೇಳಿದರು

# ನೀರಿನ ವ್ಯತ್ಯಯವಾದರೆ ಅಧಿಕಾರಿಗಳೇ ಹೊಣೆ : ಸಿಎಂ

**(1ನೇ ಪುಟದಿಂದ)** ಪ್ರದಾನ ಮಾಡಿ ಮಾತನಾಡಿದ ಅವರು, ಶುದ್ಧ ಕುಡಿಯುವ ನೀರು ಸರಬರಾಜು ಸರ್ಕಾರದ ಕರ್ತವ್ಯ, ಕಲುಷಿತ ನೀರಿನಿಂದಾದ ಅನಾಹುತಗಳನ್ನು ಕಂಡಿದ್ದೇವೆ. ಅನೇಕ ಮಂದಿ ಸಾವೀಗೀಡಾಗಿದ್ದು, ಕಾಯಿಲೆಗಳಿಗೂ ಒಳಗಾಗಿದ್ದಾರೆ ಎಂದರು.

ಇತ್ತೀಚೆಗೆ ಡೆಂಘಿ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದರ ನಿಯಂತ್ರಣಕ್ಕೆ ನಗರಪಾಲಿಕೆ, ಆರೋಗ್ಯ ಇಲಾಖೆ, ಪೌರಾಡಳಿತ ಇಲಾಖೆಗಳು ಒಟ್ಟಾಗಿ ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕರೂ ಕೈಜೋಡಿಸಿದಾಗ ಮಾತ್ರ ಇದರ ನಿರ್ಮೂಲನೆ ಸಾಧ್ಯ ಎಂದರು.

ನಿಸರ್ಗವನ್ನು ಪ್ರತಿಯೊಬ್ಬರೂ ಪ್ರೀತಿಸಿ ರಕ್ಷಿಸಬೇಕು. ಇದು ಕಷ್ಟದ ಕೆಲಸವಲ್ಲ, ಎಲ್ಲರೂ ಮನಸ್ಸು ಮಾಡಬೇಕು. ಪ್ರತಿದಿನವೂ ಪರಿಸರ ದಿನವನ್ನಾಗಿ ಆಚರಿಸುವ ಪ್ರವೃತ್ತಿ ಅಗತ್ಯ, ತ್ಯಾಜ್ಯಗಳ ಸೂಕ್ತ ವಿಲೇವಾರಿ, ಮಳೆ ನೀರು ಕೊಯ್ಲು ಮುಂತಾದ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಹೇಳಿದರು.


॥ ಶ್ರೀ ಲಕ್ಷ್ಮಿವೆಂಕಟೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾ. ಬಾಡ ಗ್ರಾಮದ ವಾಸಿ
ದಿ. ಶ್ರೀಮತಿ ಕರಿಬಸಮ್ಮ ದಿ. ಬಿ.ಕೆ. ಬಸವಲಿಂಗಪ್ಪನವರ ಮಗನಾದ
ಶ್ರೀಮತಿ ಸುವರ್ಣಮ್ಮ ದಿ. ಶ್ರೀ ಬಿ.ಕೆ. ಶೇಖರಪ್ಪನವರ ತಮ್ಮನಾದ
ಶ್ರೀಮತಿ ಶ್ರೀ ಬಿ.ಕೆ. ಶಿವಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 26.6.2024ನೇ ಬುಧವಾರ ರಾತ್ರಿ 08.30ಕ್ಕೆ
ನನ್ನ ಪೂಜ್ಯ ತಮ್ಮನವರಾದ

**ಶ್ರೀ ಬಿ.ಕೆ. ಪಂಚಾಕ್ಷರಪ್ಪ**


ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 04.07.2024ನೇ ಗುರುವಾರ ಬೆಳಿಗ್ಗೆ 11.00 ಕ್ಕೆ ಶ್ರೀ ಮರುಳಸಿದ್ದೇಶ್ವರ ಕಲ್ಯಾಣ ಮಂಟಪ, ಬಾಡ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಮೃತರ ಧರ್ಮಪತ್ನಿ ಶ್ರೀಮತಿ ಲೋಲಾಕ್ಷಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಬಾಡ ಶ್ರೀಮತಿ ಶ್ರೀ ಬಿ.ಕೆ. ಶಿವಪ್ಪ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು ಬಾಡ ಶ್ರೀಮತಿ ಶ್ರೀ ಎಂ. ಮಹಾದೇವಪ್ಪ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು, ಹುಳಪನಕಟ್ಟೆ, ಕೊಗ್ಗನೂರು ವಂಶಸ್ಥರು ಮತ್ತು ಬಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ : 99869 04402**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




**16ನೇ ವರ್ಷದ ಪುಣ್ಯಸ್ಮರಣೆ**



**ದಿ. ಕೆ. ಕೊಟ್ರಬಸಪ್ಪ**
**(ದಾವಣಗೆರೆ ಅರ್ಬನ್ ಬ್ಯಾಂಕ್ ನಿವೃತ್ತ ನೌಕರರು)**
ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು.
ನಿಮ್ಮ ನೆನಪು ಸದಾ ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಸದಾ ಸ್ಮರಿಸುತ್ತಿರುವ
**ಪತ್ನಿ : ಕೆ. ರತ್ನಮ್ಮ ಮತ್ತು ಮಕ್ಕಳು, ಅಕ್ಕಂದಿರು, ತಮ್ಮಂದಿರು, ಅಳಿಯಂದಿರು, ಸೊಸೆಯಂದಿರು**
**ಕುಟುಂಬ ವರ್ಗ ಹಾಗೂ ಬಂಧು - ಮಿತ್ರರು**



**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



॥ ಶ್ರೀ ರೇಣುಕ ಯಲ್ಲಮ್ಮ ಪ್ರಸನ್ನ ॥
ದಾವಣಗೆರೆ ವಾಸಿ **ಶ್ರೀಮತಿ ಜ್ಯೋತಿ ಪ್ರಸನ್ನ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 26.6.2024ನೇ ಬುಧವಾರ
ಮಧ್ಯಾಹ್ನ 2.13ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಪ್ರಸನ್ನ ಬೆಟಗೇರಿ**

ಇವರು ಕೈಲಾಸ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆಯನ್ನು** ದಿನಾಂಕ : 04.07.2024ನೇ ಗುರುವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ಬಸವ ಬುದ್ಧ ಭೀಮ ನಗರ, ಇಂಡಸ್ಟ್ರೀಯಲ್ ಏರಿಯಾ, ಲೋಕಿಕೆರೆ ರೋಡ್, ಇಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀಮತಿ ಜ್ಯೋತಿ ಪ್ರಸನ್ನ ಮತ್ತು** ಮಕ್ಕಳಾದ **ಸರಸ್ವತಿ ಪಿ., ಗಿರಿಜಾ ಪಿ., ನಿಸರ್ಗ ಪಿ., ಸೂರ್ಯಕಾಂತ ವೈ.,** ಮೃತರ ತಾಯಿ : **ಶ್ರೀಮತಿ ರತ್ನಮ್ಮ ಸೂರ್ಯಕಾಂತ ಬೇಟಗೇರಿ ಮತ್ತು ಸಹೋದರ-ಸಹೋದರಿಯರು ಹಾಗೂ ಬಂಧು-ಮಿತ್ರರು.**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಮೋದಿ ಸದಸ್ಯತ್ವ ಪ್ರಶ್ನಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ ವಜಾ

## ಆರೋಗ್ಯ ಚೆನ್ನಾಗಿದೆಯಾ? ಎಂದು ಅರ್ಜಿದಾರನಿಗೆ ಕೇಳಿದ ನ್ಯಾಯಾಲಯ

ನವದೆಹಲಿ, ಜು. 3 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಾರಣಾಂತಿಕ ವಿಮಾನ ಅಪಘಾತ ಸಂಚಿನಲ್ಲಿ ಭಾಗಿಯಾಗಿದ್ದರು ಹಾಗೂ ರಾಷ್ಟ್ರ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದರು. ಹೀಗಾಗಿ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಬೇಕು ಎಂದು ದಾಖಲಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಹಳ್ಳಿ ಹಾಕಿದೆ.

ಆರೋಪಗಳಲ್ಲಿ ಯಾವುದೇ ವಾಸ್ತವಾಂಶ ಇಲ್ಲ ಎಂದು ಹೈಕೋರ್ಟ್ ಹೇಳಿದೆ. ಈ ಹಿಂದೆ ಏಕ ಸದಸ್ಯ ಪೀಠ ಈ ಅರ್ಜಿಯನ್ನು ತಳ್ಳಿ ಹಾಕಿದ್ದು ನಂತರ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರ ಪೀಠದ ಎದುರು ಅರ್ಜಿ ದಾಖಲಿಸಲಾಗಿತ್ತು.

ಈ ಅರ್ಜಿಯನ್ನು ತಳ್ಳಿ ಹಾಕಿರುವ ವಿಭಾಗೀಯ ಪೀಠ, ಆರೋಪಗಳು ನಿರಾಧಾರ ಎಂದು ಹೇಳಿದೆ. ಅರ್ಜಿದಾರರ ಮಾನಸಿಕ ಸ್ಥಿತಿ ಬಗ್ಗೆ ಪ್ರಶ್ನಿಸಿರುವ ಪೀಠ, ನಿಮಗೆ ವೈದ್ಯಕೀಯ ನೆರವಿನ ಅಗತ್ಯವಿದೆ ಎಂದು ಹೇಳಿದೆ. ಅರ್ಜಿ ಸಲ್ಲಿಸಿದ ವ್ಯಕ್ತಿಗೆ ವ್ಯಕ್ತಿಯ ಮಾನಸಿಕ ಆರೋಗ್ಯದ ಮೇಲೆ ನಿಗಾ ವಹಿಸಬೇಕಿದೆ ಎಂದು ಹೇಳಿರುವ ನ್ಯಾಯಾಲಯ, ಅವರ ಮೇಲೆ ಸಂಬಂಧಿಸಿದ ಪೊಲೀಸ್ ಠಾಣಾಧಿಕಾರಿ, ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಹಾಗೂ ಜಿಲ್ಲಾ ನ್ಯಾಯಾಧೀಶರು ನಿಗಾ ಇಡಬೇಕೆಂದು ಹೇಳಿದೆ.

ಕ್ಯಾಪ್ಟನ್ ದೀಪಕ್ ಕುಮಾರ್ ಎಂಬುವವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ ಮೋದಿ ಹಾಗೂ ಅವರ ಸಹಚರರು 2018ರಲ್ಲಿ ಏರ್ ಇಂಡಿಯಾ ವಿಮಾನ ಪತನಕ್ಕೆ ಸಂಚು ನಡೆಸಿದ್ದರು. ಆ ಸಂದರ್ಭದಲ್ಲಿ ನಾನು ವಿಮಾನದ ಪೈಲೆಟ್ ಆಗಿದ್ದೆ ಎಂದು ಹೇಳಿದ್ದರು.

ಆದರೆ, ಹೈಕೋರ್ಟ್ ಈ ಅರ್ಜಿಯನ್ನು ತಳ್ಳಿ ಹಾಕಿದೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಜಿಗಿಯುತ್ತಿದ್ದಾರೆ. ಇದರಲ್ಲಿ ಯಾವುದೇ ಸಮನ್ವಯತೆ ಇಲ್ಲ. ಮೂವರು ಸುಳ್ಳು ಪ್ರಮಾಣ ಪ್ರಮಾಣ ವಚನ ಸ್ವೀಕರಿಸಿದ್ದಾರೆ ಎಂದು ಒಂದೆಡೆ ಹೇಳಲಾಗಿದೆ.


ಮತ್ತೊಂದೆಡೆ ನಾನು ಪ್ರಯಾಣಿಸುತ್ತಿದ್ದ ವಿಮಾನ ಪತನಕ್ಕೆ ಪ್ರಯತ್ನ ನಡೆಸಲಾಗಿತ್ತು ಎಂದು ಹೇಳಲಾಗಿದೆ. ಇನ್ನೊಂದೆಡೆ ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಒಬ್ಬರು ನನ್ನ ಹತ್ಯೆಗೆ ಸಂಚು ನಡೆಸಿದ್ದಾರೆ ಎಂದು ಹೇಳಲಾಗಿದೆ. ನೀವು ಆರೋಗ್ಯವಾಗಿದ್ದೀರಾ? ಯಾವುದೇ ಮನುಷ್ಯ ಈ ಅರ್ಜಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೈಕೋರ್ಟ್ ಹೇಳಿತು.

ಇದಕ್ಕೆ ಪ್ರತ್ಯುತ್ತರ ನೀಡಿದ ಅರ್ಜಿದಾರ ನಾನು ಆರೋಗ್ಯವಾಗಿದ್ದೇನೆ ಸ್ವಾಮಿ. ನನ್ನ ಅರ್ಜಿ ಸ್ಪಷ್ಟವಾಗಿದೆ ಸ್ವಾಮಿ. ನನ್ನ ಮಗಳನ್ನು ಅಪಹರಿಸಿರುವುದು ನಿಜ. ಈ ಬಗ್ಗೆ ಪೊಲೀಸ್ ವರದಿ ಇದೆ. ಅಲ್ಲದೆ ಅಪಹರಣದ ನಂತರ ಪೊಲೀಸ್ ಠಾಣೆಗೆ ನನ್ನನ್ನು ಕರೆದು, ಬಾಯಿ ಮುಚ್ಚಿಕೊಂಡಿದ್ದರೆ ಮಾತ್ರ ಮಗಳನ್ನು ವಾಪಸ್ ಕೊಡುವುದಾಗಿ ಹೇಳಲಾಗಿತ್ತು ಎಂದು ಹೇಳಿದರು.

ಆಗ ಹೈಕೋರ್ಟ್ ಪೀಠ ಮುಂದುವರೆದು ಮಾತನಾಡಿ, ಅರ್ಜಿದಾರನಿಗೆ ವೈದ್ಯಕೀಯ ನೆರವಿನ ಅಗತ್ಯವಿದೆ. ಆದರೆ, ಅರ್ಜಿದಾರ ನಾನು ಆರೋಗ್ಯವಾಗಿದ್ದೇನೆ ವೈದ್ಯಕೀಯ ನೆರವು ಬೇಡ ಎಂದು ಹೇಳುತ್ತಿದ್ದಾನೆ. ಆದರೂ ಮಾನಸಿಕ ಆರೋಗ್ಯ ಕಾಯ್ದೆಯನ್ನು ಗಮನದಲ್ಲಿಟ್ಟುಕೊಂಡು ಸಂಬಂಧಿಸಿದ ಠಾಣಾಧಿಕಾರಿ ಈತನ ಮೇಲೆ ನಿಗಾ ಇಡಬೇಕು ಎಂದು ಹೇಳಿದೆ.

# ವಚನ ಸಾಹಿತ್ಯವೇ ಸಂಪತ್ತೆಂದು ಬದುಕಿದ ಫ.ಗು ಹಳಕಟ್ಟಿ

## ಸಾಣೇಹಳ್ಳಿಯಲ್ಲಿನ ವಚನ ಕಮ್ಮಟದಲ್ಲಿ ಸ್ಮರಿಸಿದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ




ಸಾಣೇಹಳ್ಳಿ, ಜು. 3 - ಸಾಹಿತಿ ಫ.ಗು. ಹಳಕಟ್ಟಿಯವರು ವಚನ ಸಾಹಿತ್ಯವೇ ಸಂಪತ್ತೆಂದು ಬದುಕಿದವರು. ಅವರು ಅಧಿಕಾರಕ್ಕಾಗಿ ಎಂದೂ ಆಸೆಪಟ್ಟವರಲ್ಲ. ವಚನ ಸಾಹಿತ್ಯವನ್ನು ಉಳಿಸ ಬೇಕೆಂದು ಕನಸು ಕಂಡು, ಅದನ್ನು ನನಸು ಮಾಡಿದ ಮಹಾನ್ ವ್ಯಕ್ತಿ ಆಗಿದ್ದಾರೆ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಶಾಮನೂರು ಶಿವಶಂಕರಪ್ಪ ಒಳಾಂಗಣ ರಂಗಮಂದಿರದಲ್ಲಿ ನಿನ್ನೆ ನಡೆದ ವಚನ ಕಮ್ಮಟದ ಎರಡನೇಯ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಂಸ್ಕೃತಿ, ಸಾಹಿತ್ಯ, ಕಲೆ ಉಳಿಸಲಿಕ್ಕಾಗಿ ತಮ್ಮ ಪ್ರಾಣವನ್ನೇ ಪಣಕಿಟ್ಟವರನ್ನು ಸಮಾಜ ಬೇಗ ಮರೆತುಬಿಡುತ್ತೆ. ಆದರೆ ಫ ಗು ಹಳಕರ್ಟ್ಟಿಯವರನ್ನು ಯಾರೂ ಮರೆಯಲಿಕ್ಕೆ ಸಾಧ್ಯವಿಲ್ಲ.

ಹಿರಿಯ ತರಳಬಾಳು ಜಗದ್ಗುರು ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಹಳಕಟ್ಟಿಯವರನ್ನು ತುಂಬಾ ಸ್ಮರಿಸಿಕೊಳ್ಳುತ್ತಿದ್ದರು. ಹಳಕಟ್ಟಿಯವರು ಇಲ್ಲದೇ ಇದ್ದರೆ ವಿಶ್ವ ಸಾಹಿತ್ಯದ ವಚನ ಜ್ಯೋತಿಯನ್ನು ಎಲ್ಲ ಕಡೆ ಬೆಳಗಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಪ್ರತಿ ಸಂದರ್ಭದಲ್ಲಿ ಅವರು ಸ್ಮರಿಸಿಕೊಳ್ಳುತ್ತಿದ್ದರು ಎಂದರು.

ವಚನ ಸಾಹಿತ್ಯದ ಅಧ್ಯಯನ, ಪ್ರಕಟಣೆಗಾಗಿ ಇಡೀ ಜೀವನವನ್ನೇ ಕರ್ಪೂರದಂತೆ, ಗಂಧದಂತೆ ಸವೆಸಿಕೊಂಡರು. ವಚನ ಸಾಹಿತ್ಯದ ಪ್ರಕಟಣೆಗೆ ಅನೇಕ ಸವಾಲುಗಳನ್ನು ಎದುರಿಸಿದರು. ಅದಕ್ಕೆ ಎದೆಗುಂದದೇ ಮನೆ- ಮಾರುಗಳನ್ನು ಮಾರಿ ತಾವೇ ವಚನ ಸಾಹಿತ್ಯವನ್ನು ಮುದ್ರಿಸಿ ಪ್ರಕಟಣೆ ಮಾಡಿದರು.

ಬಿ.ಎಂ.ಶ್ರೀ ಅವರು ಒಮ್ಮೆ ಬಿಜಾಪುರಕ್ಕೆ ಬಂದಾಗ ಅಲ್ಲಿ ಗೋಳಗುಮ್ಮಟ ನೋಡಲಿಕ್ಕೆ ಹೋಗಬೇಕು ಎಂದು ಹಲವರು ಹೇಳಿದಾಗ, 'ಆ ಗೊಮ್ಮಟ ಅಲ್ಲ; ಬೇರೆ ಇನ್ನೊಂದು ಗೋಳಗುಮ್ಮಟ ಇದೆ. ಅದೇ ಫ. ಗು. ಹಳಕಟ್ಟಿ ಎಂಬ ವಚನ ಗುಮ್ಮಟ.' ಅದನ್ನು ನೋಡಲಿಕ್ಕೆ ಹೋಗೋಣ ಎನ್ನುತ್ತಾರಂತೆ, ಹಳಕಟ್ಟಿಯವರು ಅಪರೂಪದ ಸಾಹಿತ್ಯ ರಕ್ಷಣೆ ಮಾಡದೇ ಹೋಗಿದ್ದರೆ ವಚನ ಸಾಹಿತ್ಯ ಉಳಿಲಿಕ್ಕೆ ಸಾಧ್ಯವಿಲ್ಲ ಎಂದು ಬಿ.ಎಂ.ಶ್ರೀ ಹೇಳಿದ್ದರು ಎಂದು ಸ್ವಾಮೀಜಿ ಸ್ಮರಿಸಿದರು.

'ಪಂಚಾಚಾರಗಳ' ಕುರಿತಂತೆ ವೀರಣ್ಣ ರಾಜೂರು ಮಾತನಾಡಿ, ಹಳಕಟ್ಟಿಯವರು ವಚನ ಸಾಹಿತ್ಯವನ್ನು ಎಲ್ಲಾ ರೀತಿಯಲ್ಲಿ ಅಧ್ಯಯನ ಮಾಡಿದ್ದಾರೆ. ವಚನಗಳನ್ನು ತಾತ್ವಿಕ ಹಿನ್ನೆಲೆಯಲ್ಲಿ ಹೇಗೆ ಪ್ರಕಟಿಸಬೇಕೆಂದು ತೋರಿಸಿಕೊಟ್ಟು ಹೋಗಿದ್ದಾರೆ ಎಂದರು.

'ಕರ್ಮ ಸಿದ್ಧಾಂತ' ಕುರಿತು ಬಸವ ಮರುಳಸಿದ್ಧ ಸ್ವಾಮೀಜಿ ಮಾತನಾಡಿ, ಕರ್ಮ ಸಿದ್ಧಾಂತ ನಮ್ಮೆಲ್ಲರ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ಕರ್ಮ ಸಿದ್ಧಾಂತ ಎಂದರೆ ಹೇಗೆ ನಡೆದುಕೊಳ್ಳುತ್ತೇವೋ ಅದನ್ನು ಪಡೆದುಕೊಳ್ಳುತ್ತೇವೆ. ಕರ್ಮ ಸಿದ್ಧಾಂತ ಒಂದೊಂದು ಧರ್ಮ ದೃಷ್ಟಿಯಲ್ಲಿ ಬೇರೆ ಬೇರೆ ವ್ಯಾಖ್ಯಾನ ಪಡೆದುಕೊಳ್ಳುತ್ತದೆ ಎಂದರು.

ಹಿಂದಿನ ಜನ್ಮದ ಪುಣ್ಯ, ಪಾಪಗಳು ಮುಕ್ತವಾಗ ಬೇಕು ಎನ್ನುವ ಕಾರಣಕ್ಕಾಗಿ ಕರ್ಮಠಗಳನ್ನು ಆಚರಣೆ ಮಾಡಬೇಕೆಂದು ವೈದಿಕರು ತಿಳಿಸಿದರು. ಕರ್ಮ ಎಂದರೆ ಉದ್ದೇಶ ಎಂದು ಬುದ್ಧ ವ್ಯಾಖ್ಯಾನ ಮಾಡುವರು. ಶರಣರು ಕರ್ಮ ಸಿದ್ಧಾಂತವನ್ನು ಒಪ್ಪಿ ಕರ್ಮಠಗಳನ್ನು ತಿರಸ್ಕಾರ ಮಾಡುವರು. ಕರ್ಮ ಸಿದ್ಧಾಂತಗಳಲ್ಲಿ ಯಾವ್ಯಾವ ತತ್ವಗಳು ಇರಬೇಕೆಂದು ತಿಳಿಸಿದರು.

ಕರ್ಮದಿಂದ ಮುಕ್ತವಾಗಲಿಕ್ಕೆ ಶರಣರು ಸರಳವಾದ ಮಾರ್ಗವನ್ನು ಹೇಳಿದರು. ಕರುಣೆ, ವಿನಯ, ಸಮತೆ, ಪಾದೋದಕ ಅಳವಡಿಸಿಕೊಂಡರೆ ಎಲ್ಲ ಕಷ್ಟಗಳಿಂದ ಮುಕ್ತವಾಗೋದಕ್ಕೆ ಸಾಧ್ಯ. ಶರಣ ಕರ್ಮ ಸಿದ್ಧಾಂತ ವೈದಿಕ ಕರ್ಮ ಸಿದ್ಧಾಂತಗಳಿಗಿಂತ ಭಿನ್ನವಾಗಿರುವಂಥದ್ದು ಎಂದರು.

ಈ ಸಂದರ್ಭದಲ್ಲಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ 'ಅರಿವಿನ ಪರಿಧಿ' ಕೃತಿಯನ್ನು ಲೋಕಾರ್ಪಣೆಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬಸವರಾಜ ಸಾದರ ಸ್ವಾಗತಿಸಿ, ಕಾರ್ಯಕ್ರಮ ನಡೆಸಿಕೊಟ್ಟರು. ಶಿಬಿರದ ಸಂಚಾಲಕ ಮೋಟಗಿ ಮಠದ ಶ್ರೀ ಚೆನ್ನಬಸವ ಸ್ವಾಮೀಜಿ ಹಾಗೂ 70 ಜನ ಯುವ ಮಠಾಧೀಶರು ಹಾಗೂ ಮರಿ ದೇವರುಗಳು ಉಪಸ್ಥಿತರಿದ್ದರು.

ಜಡೆ ಸಂಸ್ಥಾನ ಮಠದ ಶ್ರೀ ಜಡೆ ಸ್ವಾಮೀಜಿ ಶಿಬಿರಾರ್ಥಿಗಳಿಗೆ ಯೋಗಾಸನ ನಡೆಸಿಕೊಟ್ಟರು. ಶಿವಮೊಗ್ಗ ಬಸವ ಕೇಂದ್ರದ ಮರುಳಸಿದ್ಧ ಸ್ವಾಮೀಜಿ ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಿಸಿದರು.

# ಹತ್ರಾಸ್ ಅವಘಡಕ್ಕೆ ಭದ್ರತಾ ಸಿಬ್ಬಂದಿ ಕಾರಣ : ಪ್ರಾಥಮಿಕ ವರದಿ

ಹತ್ರಾಸ್, ಜು. 3 - ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ಕಾಲ್ತುಳಿತಕ್ಕೆ ಸಿಲುಕಿ 121 ಜನ ಸಾವನ್ನಪ್ಪಲು ಭೋಲೆ ಬಾಬಾ ಅವರ ಭದ್ರತಾ ಸಿಬ್ಬಂದಿ ಅನುಯಾಯಿಗಳನ್ನು ದೂಡಿದ್ದು ಹಾಗೂ ಜಾರು ನೆಲ ಪ್ರಮುಖ ಕಾರಣವಾಗಿದೆ ಎಂದು ಎಸ್.ಡಿ.ಎಂ. ನೀಡಿದ ಪ್ರಾಥಮಿಕ ವರದಿಯಲ್ಲಿ ತಿಳಿಸಲಾಗಿದೆ.

ಸಿಕಂದ್ರಾ ರಾವ್ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಅವರು ಜಿಲ್ಲಾಧಿಕಾರಿಗೆ ತಮ್ಮ ಪ್ರಾಥಮಿಕ ವರದಿ ಸಲ್ಲಿಸಿದ್ದಾರೆ. ಸತ್ಸಂಗಕ್ಕೆ ಅನುಮತಿ ನೀಡಿದ ಎಸ್.ಡಿ.ಎಂ. ಅವರು ಘಟನೆ ನಡೆದಾಗ ಸ್ಥಳದಲ್ಲಿ ಉಪಸ್ಥಿತರಿದ್ದರು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸತ್ಸಂಗ ನಡೆಯುತ್ತಿರುವಾಗ ಸುಮಾರು 2.5 ಲಕ್ಷ ಜನ ನೆರೆದಿದ್ದರು. ಮಧ್ಯಾಹ್ನ 12:30ರ ಸಮಯದಲ್ಲಿ ಭೋಲೇ ಬಾಬಾ ಎಂದು ಹೇಳಲಾಗುವ ನಾರಾಯಣ ಸಾಕರ್ ಹರಿ ಅವರು ಸ್ಥಳಕ್ಕೆ ಬಂದಿದ್ದರು. ಸುಮಾರು ಒಂದು ಗಂಟೆಗಳ ಕಾಲ ಕಾರ್ಯಕ್ರಮ ನೆರವೇರಿತು. ನಂತರ 1.40ರ ಸಮಯದಲ್ಲಿ ಭೋಲೇ ಬಾಬಾ ಪೆಂಡಾಲಿಂದ ಹೊರಬಂದು ಎತಾವಾ ನಗರದ ಕಡೆ ತೆರಳಿದರು ಎಂದು ಪ್ರಾಥಮಿಕ ವರದಿಯಲ್ಲಿ ತಿಳಿಸಲಾಗಿದೆ.

ಭೋಲೇ ಬಾಬಾ ಸ್ಥಳದಿಂದ ತೆರಳುವಾಗ ಅವರ ಭಕ್ತರು ದರ್ಶನಕ್ಕಾಗಿ ಹಾಗೂ ಪಾದ ದೂಳಿ ಪಡೆಯಲು ಭಾವಿಸಿದರು. ಸತ್ಸಂಗದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು, ಪುರುಷರು ಹಾಗೂ ಮಕ್ಕಳು ಬಾಬಾ ಅವರ ಪಾದದ ದೂಳಿಯನ್ನು ತಮ್ಮ ಹಣೆಯ ಮೇಲೆ ಹಚ್ಚಿಕೊಳ್ಳಲು ಪ್ರಯತ್ನಿಸಿದರು. ಅವರ ಕಾಲುಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವ ಪ್ರಯತ್ನ ನಡೆಸಿದರು. ಆದರೆ ಹೆಚ್ಚು ಜನರು ಬಾಬಾ ಕಡೆ ಧಾವಿಸಿದಾಗ ಪರಿಸ್ಥಿತಿ ಬದಲಾಯಿತು. ಜನರು ರಸ್ತೆಯ ಮೇಲಿನ ಡಿವೈಡರ್‌ಗಳನ್ನು ದಾಟಿ ಬಾಬಾ ವಾಹನದ ಕಡೆ ದರ್ಶನಕ್ಕಾಗಿ ಧಾವಿಸಿದರು.

ಆಗ ಬಾಬಾ ಅವರ ಭದ್ರತಾ ಸಿಬ್ಬಂದಿ ಮತ್ತು ಸೇವಾಕರ್ತರು ಗುಂಪನ್ನು ಹಿಂದೆ ತಳ್ಳುವ ಪ್ರಯತ್ನ ನಡೆಸಿದರು. ಇದರಿಂದಾಗಿ ಕೆಲವರು ನೆಲದ ಮೇಲೆ ಬಿದ್ದರು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಇದು ಜನರಲ್ಲಿ ಗಾಬರಿ ಮೂಡಿಸಿ ಗೊಂದಲಕ್ಕೆ ಕಾರಣವಾಯಿತು. ಆಗ ಜನರು ಸತ್ಸಂಗದ ಸ್ಥಳದ ಪಕ್ಕದಲ್ಲಿದ್ದ ಮೈದಾನದ ಕಡೆ ಧಾವಿಸಿದರು. ಈ ವೇಳೆ ಜಾರು ನೆಲದಲ್ಲಿ ಹಲವರು ಬಿದ್ದರು. ಅವರ ಮೇಲೆ ಉಳಿದವರು ನುಗ್ಗಿದ ಕಾರಣ ಕೆಳಗೆ ಬಿದ್ದವರು ಮೇಲೆ ಹೇಳಲು ಸಾಧ್ಯವಾಗಲಿಲ್ಲ. ಮುಖ್ಯ ಸೇವಾದಾರ ದೇವ ಪ್ರಕಾಶ್ ಮಧುಕರ್ ಹಾಗೂ ಇತರೆ ಆಯೋಜಕರ ವಿರುದ್ಧ ಘಟನೆಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ನೀಟ್-ಪಿಜಿ ಪರೀಕ್ಷೆ ಮುಂದೂಡಿಕೆ ಖಂಡನೀಯ

ದಾವಣಗೆರೆ, ಜು. 3- ಪರೀಕ್ಷೆಯ ಹಿಂದಿನ ರಾತ್ರಿ ನೀಟ್-ಪಿಜಿ ಪರೀಕ್ಷೆಯನ್ನು ಮುಂದೂಡಿರುವುದನ್ನು ಎಐಡಿಎಸ್‌ಓ ಕರ್ನಾಟಕ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಖಂಡಿಸಿದ್ದಾರೆ.

ಇದರಿಂದ ಪರೀಕ್ಷೆಗೆ ಮುಂಚಿತವಾಗಿ ಹಾಜರಾಗಬೇಕಿದ್ದ, ಸ್ಪರ್ಧಾತ್ಮಕ ಪರೀಕ್ಷೆಗೆ ತಮ್ಮನ್ನೇ ತಾವು ಸಿದ್ಧಪಡಿಸಿಕೊಳ್ಳುತ್ತಿದ್ದ ಸುಮಾರು 2.5 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಭಾರೀ ಒತ್ತಡ ಮತ್ತು ಆತಂಕಕ್ಕೆ ಒಳಗಾಗಿದ್ದಾರೆಂದು ಹೇಳಿದ್ದಾರೆ.

ನೀಟ್-ಪಿಜಿ 2024 ರ ಪರೀಕ್ಷಾ ದಿನಾಂಕ ನಾಲ್ಕು ಬಾರಿ ಬದಲಾಗಿದೆ. ಇದು ಎಲ್ಲಾ ಕಾರ್ಯನಿರತ ವೈದ್ಯರಾಗುವ ಪರೀಕ್ಷಾ ರ್ಥಿಗಳಿಗೆ ಅಪಾರ ಕಿರುಕುಳವನ್ನುಂಟು ಮಾಡಿದೆ. ಅವರ ಕುಟುಂಬ ಮತ್ತು ಕೆಲಸದ ಪ್ರದೇಶಗಳಲ್ಲಿ ಸಾಕಷ್ಟು ವ್ಯವಸ್ಥೆಗಳನ್ನು ಮಾಡಿಕೊಳ್ಳುವ ಮೂಲಕ ಈಗಾಗಲೇ ಪರೀಕ್ಷಾ ಕೇಂದ್ರಗಳನ್ನು ತಲುಪಿದ್ದಾರೆ. ಈ ಘಟನೆಯು ನೀಟ್-ಪಿಜಿ ಪರೀಕ್ಷೆಯನ್ನು ನಡೆಸುವಲ್ಲಿ ಕೂಡ ದೊಡ್ಡ ಹಗರಣ ನಡೆದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದಿದ್ದಾರೆ.

ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆ ಯಿಂದ ಉಂಟಾದ ಇಂತಹ ಪರಿಸ್ಥಿತಿಯನ್ನು ಖಂಡಿಸಲು ನಮ್ಮಲ್ಲಿ ಯಾವುದೇ ಪದವಿಲ್ಲ. ಕೆಲ ದಿನಗಳ ಹಿಂದೆ ಯುಜಿಸಿ-ನೆಟ್ ಪರೀಕ್ಷೆಯನ್ನು ಪರೀಕ್ಷೆ ಮುಗಿದ ಕೇವಲ 24 ಗಂಟೆಗಳ ನಂತರ ಮಾತ್ರ ರದ್ದುಗೊಳಿಸಲಾಯಿತು.

ಸಿಎಸ್ಐಆರ್ ನೆಟ್ ಕೂಡ ಮುಂದೂಡಲಾಗಿದೆ. ಈ ಎಲ್ಲಾ ಘಟನೆಗಳು ನೀಟ್- ಯುಜಿ-2024 ರ ಹಗರಣದ ಹಿನ್ನೆಲೆಯಲ್ಲಿ ಸಂಭವಿಸಿದ್ದು, ಇದು ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ನಡೆದ ಅತಿ ದೊಡ್ಡ ಹಗರಣವಾಗಿದೆ ಎಂದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಗರಣದ ವಿರುದ್ಧ ದೇಶದ ವಿವಿಧೆಡೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ವಿದ್ಯಾರ್ಥಿಗಳ ಹೋರಾಟದ ಒತ್ತಡದಲ್ಲಿ ಸರ್ಕಾರವು ಎನ್‌ಟಿಎಯು ಮಹಾನಿರ್ದೇಶಕರನ್ನು ತೆಗೆದು ಹಾಕುವ ಮೂಲಕ ಹಗರಣದ ಆರೋಪಗಳನ್ನು ಮರೆ ಮಾಚಲು ಪ್ರಯತ್ನಿಸುತ್ತಿದೆ. ಆದರೆ ಎನ್‌ಟಿಎ ರದ್ದುಗೊಳಿಸುವ ಮತ್ತು ಉನ್ನತ ಮಟ್ಟದ ನ್ಯಾಯಾಂಗ ತನಿಖೆಯ ಬೇಡಿಕೆಗಳು ಇನ್ನೂ ಈಡೇರಿಲ್ಲ ಎಂದು ಹೇಳಿದ್ದಾರೆ.

ಹಗರಣದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು. ಹಗರಣದಲ್ಲಿ ಭಾಗಿಯಾದ ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು.

ಕೇಂದ್ರ ಆರೋಗ್ಯ ಮತ್ತು ಶಿಕ್ಷಣ ಸಚಿವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

# ಪ್ರಮಾಣ ವಚನ ಸ್ವೀಕರಾದ ವೇಳೆ ಘೋಷಣೆಗೆ ತಡೆ

ನವದೆಹಲಿ, ಜು. 3 - ಲೋಕಸಭಾ ಸದಸ್ಯರು ಪ್ರಮಾಣ ವಚನ ಸ್ವೀಕರಿಸುವಾಗ ಘೋಷಣೆಗಳನ್ನು ಕೂಗಬಾರದು ಎಂದು ಲೋಕಸಭಾಧ್ಯಕ್ಷ ಹೋಂ ಬಿರ್ಲಾ ಅವರು ನಿಯಮಗಳಿಗೆ ತಿದ್ದುಪಡಿ ತಂದಿದ್ದಾರೆ.

ಲೋಕಸಭೆಯ ಕೆಲಸರು ಪ್ರಮಾಣ ವಚನ ಸ್ವೀಕರಿಸುವ ವೇಳೆ ಘೋಷಣೆಗಳನ್ನು ಕೂಗಿದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಲೋಕಸಭೆಗೆ ನೂತನವಾಗಿ ಆಯ್ಕೆಯಾದ ಸಂಸದರು ಪ್ರಮಾಣ ವಚನ ಸ್ವೀಕರಿಸುವಾಗ ಜೈ ಸಂವಿಧಾನ, ಜೈ ಹಿಂದೂ ರಾಷ್ಟ್ರ ಎಂಬ ಘೋಷಣೆಗಳನ್ನು ಕೂಗಿದ್ದರು. ಒಬ್ಬ ಸಂಸದ ಜೈ ಪ್ಯಾಲೆಸ್ತೇನ್ ಎಂದು ಕೂಗಿದ್ದು ಹಲವರ ಆಕ್ಷೇಪಕ್ಕೆ ಕಾರಣವಾಗಿತ್ತು.

# ಸಮವಸ್ತ್ರ ವೃತ್ತಿಯ ವಿವಿಧ ಹುದ್ದೆಗಳಿಗೆ ಸೇರಬಸುವ ಅಭ್ಯರ್ಥಿಗಳಿಗೆ ತರಬೇತಿ

ದಾವಣಗೆರೆ, ಜು.3- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿಗೆ ಭಾರತೀಯ ಸೇನೆ ಸೇರಿದಂತೆ ಇತರೆ ಸಮವಸ್ತ್ರ ಸೇವೆಗಳಿಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ - 1, 2 (ಎ), 3 (ಎ), 3 (ಬಿ) ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ.

ತರಬೇತಿಗಾಗಿ ಅರ್ಜಿ ಸಲ್ಲಿಸಲು ಇದೇ ದಿನಾಂಕ 10 ಕೊನೆಯ ದಿನವಾಗಿರುತ್ತದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಯನ್ನು ಇಲಾಖಾ https://bcwd.karnataka.gov.in ನಿಂದ ಪಡೆಯಬಹುದು. ದಕ್ಷಿಣ ಕನ್ನಡ ಜಿಲ್ಲೆ - ದೂ.ಸಂ. 0824-2225078, ಉಡುಪಿ ಜಿಲ್ಲೆ - 0820-2574881, ಉತ್ತರ ಕನ್ನಡ ಜಿಲ್ಲೆ - ದೂ.ಸಂ : 08382-226589 ನ್ನು ಸಂಪರ್ಕಿಸಬಹುದೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು

ಬಾಪೂಜಿ ಮಕ್ಕಳ ಆಸ್ಪತ್ರೆ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 3.30 ಗಂಟೆಗೆ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ವಯಸ್ಕರನ್ನು ಕಾಡುವ ಬೆನ್ನು ನೋವು-ಕಾರಣ ಚಿಕಿತ್ಸೆ ಮತ್ತು ಪರಿಹಾರ' ವಿಷಯವಾಗಿ ಜೆಜೆಎಂಎಂಸಿ ಕೀಲು ಮೂಳೆ ವಿಭಾಗದ ಪ್ರಾಧ್ಯಾಪಕ ಡಾ.ಜೆ.ರಘುಕುಮಾರ್ ಉಪನ್ಯಾಸ ನೀಡುವರು.

# ಮಾದಕ ವಸ್ತು ಬದುಕನ್ನು ಕಸಿದುಕೊಳ್ಳುತ್ತದೆ

## ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ್

### ಕಾರಾಗೃಹ ನಿವಾಸಿಗಳಿಗೆ ಜಾಗೃತಿ ಕಾರ್ಯಕ್ರಮ

ದಾವಣಗೆರೆ, ಜು.3- ಮಾದಕ ವಸ್ತುಗಳು ನಮ್ಮ ಜೀವನವನ್ನು ಹಾಳು ಮಾಡುವುದಲ್ಲದೇ ನಮ್ಮನ್ನು ದೈಹಿಕ, ಮಾನಸಿಕವಾಗಿ ಹಾಳು ಮಾಡುತ್ತವೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ್ ತಿಳಿಸಿದರು.

ಜಿಲ್ಲಾ ಕಾರಾಗೃಹ ಇಲಾಖೆಯ ಸಂಭಾಗಣದಲ್ಲಿ ಕಳೆದ ವಾರ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳ ಸಾಗಣಿಕೆ ವಿರೋಧಿ ದಿನದ ಪ್ರಯುಕ್ತ ಕಾರಾಗೃಹ ನಿವಾಸಿಗಳಿಗೆ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯುವ ಸಮೂಹವು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ. ಯುವಕರು ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಆಲೋಚನೆ ಮಾಡಬೇಕೆ ಹೊರತು, ದುರಾಲೋಚನೆ ಮಾರ್ಗದ ಕಡೆ ಗಮನಹರಿಸಬಾರದು ಎಂದರು.

ಈಗಿನ ಕಾಲೇಜಿನ ಯುವಕರು ತಂಬಾಕು, ಸಿಗರೇಟ್ ಇನ್ನಿತರೆ ಮಾದಕ ವಸ್ತುಗಳನ್ನು ಉಪಯೋಗಿಸುತ್ತಿದ್ದು. ವಿಲಾಸಿ ಜೀವನಕ್ಕೆ ಅವಲಂಬನೆಯಾಗುತ್ತಿದ್ದಾರೆ. ಕೆಲ ಕೀಡಿಗೇಡಿಗಳು ಮಾದಕ ವಸ್ತುಗಳ ಕಳ್ಳ ಸಾಗಾಣಿಕೆಯಲ್ಲಿ ಯುವಕರಿಗೆ ಆಸೆ ತೋರಿಸಿ ಯುವಕರನ್ನು ತಪ್ಪುದಾರಿಯತ್ತ ಕರೆದೊಯ್ಯುತ್ತಿದ್ದಾರೆ. ಮಾದಕ ವ್ಯಸನಕ್ಕೆ ದಾಸರಾದವರು ಪರಿಜ್ಞಾನವಿಲ್ಲದೇ ನಶೆಯಲ್ಲಿಯೇ ಏನಾದರೂ ಅವಘಡಗಳನ್ನು ಮಾಡಿಕೊಂಡು ಕಾರಾಗೃಹಕ್ಕೆ ಬಂದಿರುವವರೇ ಹೆಚ್ಚಾಗಿದೆ. ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವಿಕೆಯಲ್ಲಿ ಯೋಗ, ಧ್ಯಾನದಲ್ಲಿ ನಿರತರಾಗಬೇಕು ಮತ್ತು ಕಾರಾಗೃಹವು ನಿಮಗೆ ಪರಿವರ್ತನಾ ಮಂದಿರವಿದ್ದಂತೆ, ಇಲ್ಲಿ ಬಂದಿರುವ ಎಲ್ಲರೂ ಕೂಡ ತಮ್ಮ ಮನಃಪರಿವರ್ತನೆ ಮಾಡಿಕೊಂಡು ಹೊರಗಡೆ ಹೋದ ನಂತರ ಹೊಸ ಜೀವನವನ್ನು ಪ್ರಾರಂಭಿಸಿ ಎಂದು ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ್ ಮಾತನಾಡಿ, ಅಕ್ರಮ ಮಾದಕ ವಸ್ತುಗಳು ಮತ್ತು ವಿನೋದ ಉಂಟು ಮಾಡುವ ಡ್ರಗ್ಸ್‌ಗಳಲ್ಲಿ ಕೆಲ ಕೀಡಿಗೇಡಿಗಳು ಯುವಕರನ್ನು ದುರ್ಮಾಂಗಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿದರೆ ಅಂತವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರಾಗೃಹದ ಅಧೀಕ್ಷಕ ಕರ್ನಾ.ಬಿ.ಕ್ಷತ್ರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿ ಕಾರಿ ಡಾ.ಷಣ್ಮುಖಪ್ಪ, ಜಿಲ್ಲಾ ಆಸ್ಪತ್ರೆಯ ಮನೋ ವೈದ್ಯ ಡಾ. ಮರುಳಸಿದ್ದಪ್ಪ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ. ಮಂಜು ನಾಥ್ ಎಲ್. ಪಾಟೀಲ್, ಆರೋಗ್ಯ ಇಲಾಖೆಯ ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿ ಡಾ.ಸುರೇಶ್ ಬಾರ್ಕಿ, ಮನೋವೈದ್ಯಕೀಯ ಸಂಶೋಧನಾ ವಿದ್ಯಾರ್ಥಿ ಡಾ.ಐಶ್ವರ್ಯ, ಡಾ. ಪ್ರಶಲ್ ಹೆಚ್. ಸೈಕಿಯಾಟ್ರಿಕ್ ಸೋಶಿಯಲ್ ವರ್ಕರ್ ಸಂತೋಷ್‌ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ಮನೋವೈದ್ಯಕೀಯ ವಿಭಾಗ, ಚಿಗಟೇರಿ ಜಿಲ್ಲಾಸ್ಪತ್ರೆ ದಾವಣಗೆರೆ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಕಾರಾಗೃಹ ಇಲಾಖೆ, ಹಾಗೂ ವಿವಿಧ ಇಲಾಖೆಯ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

# ಬ್ಯಾಟರಿ ತಂತ್ರಜ್ಞಾನದಲ್ಲಿ ನವೀನ ಸಂಶೋಧನೆ ಅಗತ್ಯ

## ಧ.ರಾ.ಮ. ವಿಜ್ಞಾನ ಪದವಿ ಕಾಲೇಜಿನ ಕಾರ್ಯಕ್ರಮದಲ್ಲಿ ಡಾ. ಜಿ. ಮಾನವೇಂದ್ರ



ದಾವಣಗೆರೆ, ಜು. 3- ಸುರಕ್ಷತೆಯ ಕಾಳಜಿ ಮತ್ತು ಶೇಖರಣಾ ಬೇಡಿಕೆಗಳನ್ನು ಪೂರೈಸಲು ಸೌರ ಮತ್ತು ಪವನ ಶಕ್ತಿಯ ದಕ್ಷತೆಯನ್ನು ಸುಧಾರಿಸುವ ಪ್ರಾಮುಖ್ಯತೆಯಿಂದಾಗಿ ಬ್ಯಾಟರಿ ತಂತ್ರಜ್ಞಾನದಲ್ಲಿ ನವೀನ ಸಂಶೋಧನೆಯ ತುರ್ತು ಅಗತ್ಯವಿದೆ ಎಂದು ಬಿಐಇಟಿ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಜಿ. ಮಾನವೇಂದ್ರ ಹೇಳಿದರು.

ನಗರದ ಧ.ರಾ.ಮ. ವಿಜ್ಞಾನ ಪದವಿ ಕಾಲೇಜಿನಲ್ಲಿ 'ಪ್ರಸ್ತುತ ಹಾಗೂ ಮುಂದಿನ ಪೀಳಿಗೆಯ ಬ್ಯಾಟರಿ ಮತ್ತು ಇಂಧನ ಕೋಶಗಳು' ಕುರಿತ ಒಂದು ದಿನದ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಿಡ್ ಸ್ಥಿರೀಕರಣದಲ್ಲಿ ಬ್ಯಾಟರಿಗಳ ನಿರ್ಣಾಯಕ ಪಾತ್ರ ಮತ್ತು ಪರಿಸರ ಸ್ನೇಹಿ ಶಕ್ತಿಗಾಗಿ ಹೈಡ್ರೋಜನ್ ಇಂಧನ ಕೋಶಗಳ ಸಂಭಾವ್ಯತೆಯನ್ನು ಅವರು ಒತ್ತಿ ಹೇಳಿದರು. ಈ ಪ್ರದೇಶಗಳಲ್ಲಿ ಸುಧಾರಿತ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಸಂಶೋಧಕರನ್ನು ಒತ್ತಾಯಿಸಿದರು.

ಬಿಐಇಟಿ ಕೌಶಲ್ಯ ಅಭಿವೃದ್ಧಿ ಕೇಂದ್ರದ ಡೀನ್ ಡಾ. ಎ.ಎಸ್. ಶರಣ್ ಅವರು ಬ್ಯಾಟರಿಗಳು ಮತ್ತು ಇಂಧನ ಕೋಶಗಳ ಕುರಿತ ಮಾತುಗಳಲ್ಲಿ ಜಾಗತಿಕ ಸಮಸ್ಯೆಗಳನ್ನು ಪ್ರಸ್ತಾಪಿಸಿದರು.

ಪ್ರಾಚೀನ ಭಾರತೀಯ ಕೊಡುಗೆಗಳು ಮತ್ತು ಶಕ್ತಿಯ ಶೇಖರಣೆಯಲ್ಲಿ ಐತಿಹಾಸಿಕ ಬೆಳವಣಿಗೆಗಳ ಬಗ್ಗೆ ಬೆಳಕು ಚೆಲ್ಲಿದ ಅವರು, ಲೀಥಿಯಂ -ಐಯಾನ್ ಬ್ಯಾಟರಿಗಳ ಬೆಳವಣಿಗೆ ಮತ್ತು ಇಂಧನ ಕೋಶಗಳಲ್ಲಿನ ಪ್ರಗತಿಗಳಂತಹ ಪ್ರಸ್ತುತ ಪ್ರವೃತ್ತಿಗಳಿಗೆ ಒತ್ತು ನೀಡಿ, ನಮ್ಮ ಶಕ್ತಿಯ ಭವಿಷ್ಯವನ್ನು ರೂಪಿಸುವಲ್ಲಿ ತಂತ್ರಜ್ಞಾನಗಳ ಪಾತ್ರ ಪ್ರಮುಖವಾದುದು ಎಂದರು.

ಸುಸ್ಥಿರತೆ, ದಕ್ಷತೆ ಮತ್ತು ನವೀಕರಿಸಬಹುದಾದ ವಸ್ತುಗಳೊಂದಿಗೆ ಏಕೀಕರಣದ ಬಗ್ಗೆ ನಿರಂತರ ಸಂಶೋಧನೆಯ ಅವಶ್ಯವಿದೆ ಎಂದು ಕರೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾದ ಪುಣೆಯ ಎನ್‌ಸಿಎಲ್ ವಿಜ್ಞಾನಿ ಡಾ. ಜಿ.ಪಿ. ನಾಯ್ಕ್, ರಿಪಬ್ಲಿಕ್ ಕೋರಿಯಾ ವಿಜ್ಞಾನಿ ಡಾ. ಮಹೇಶ್ ಇಟಗಿ ಅವರು ಮುಂದಿನ ಪೀಳಿಗೆಯ ಬ್ಯಾಟರಿ ಹಾಗೂ ಇಂಧನ ಕೋಶಗಳ ಅವಶ್ಯಕತೆಗಳ ಬಗ್ಗೆ ಅರ್ಥಪೂರ್ಣವಾಗಿ ವಿಷಯ ಮಂಡಿಸಿದರು.

ಧ.ರಾ.ಮ. ವಿಜ್ಞಾನ ಪದವಿ ಕಾಲೇಜಿನ ಪ್ರಾಂಶುಪಾಲರಾದ ಎಂ.ಸಿ. ರೂಪಶ್ರೀ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಬಿ.ಸಿ. ವಸಂತಕುಮಾರ್ ಸೇರಿದಂತೆ, ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ದಾವಣಗೆರೆ, ಜು. 3 - ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್‌ನಿಂದ ಪ್ರತಿಭಾವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ನಗದಾಗಿ ವಿದ್ಯಾರ್ಥಿ ವೇತನ ವಿತರಿಸುವ ಯೋಜನೆ ಹಮ್ಮಿಕೊಂಡಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಸಿ.ಆರ್. ವಿರೂಪಾಕ್ಷಪ್ಪ ತಿಳಿಸಿದ್ದಾರೆ.

ದಾವಣಗೆರೆ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಮುದಾಯದ ಮಕ್ಕಳಿಗೆ ಸಾರ್ವಜನಿಕವಾಗಿ ಕೊಡ ಮಾಡುವ ವಿದ್ಯಾರ್ಥಿ ವೇತನ ಶೇ. 85 ರಷ್ಟು ಅಂಕ ಪಡೆದ ಪ್ರತಿಭಾವಂತ ಮಕ್ಕಳು ಅರ್ಜಿ ಸಲ್ಲಿಸಬಹುದು. 2023-24ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದ ಪ್ರಥಮ ಮತ್ತು ದ್ವಿತೀಯ ವರ್ಷ ಪಿ.ಯು.ಸಿ., ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು.

ವಿವರಕ್ಕೆ ಸಿ.ಆರ್. ವಿರೂಪಾಕ್ಷಪ್ಪ ಅಧ್ಯಕ್ಷರು, ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್, ಚನ್ನಗಿರಿ ರಂಗಪ್ಪ ಗಡಿಯಾರ ಗೋಪುರದ ಎದುರು, ದಾವಣಗೆರೆ-577001. ಇಲ್ಲಿಗೆ ನಾಡಿದ್ದು ದಿನಾಂಕ 5 ರೊಳಗೆ ಅರ್ಜಿ ಸಲ್ಲಿಸುವಂತೆ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಭರತ್ ಚನ್ನಗಿರಿ ತಿಳಿಸಿದ್ದಾರೆ.

## ಪ್ರಕಟಣೆ

ಈ ಕೆಳಗೆ ಸಹಿ ಮಾಡಿದ ನಾನು, ಶ್ರೀ ಪ್ರವೀಣ ಕುಮಾರ್ ಕಂಪ್ಲಿ ಬೆಲ್ಲದ ವಾಸ: ಡೋರ್ ನಂ. 197, 16ನೇ ಕ್ರಾಸ್, ಜೆ.ಎನ್.ಆರ್.ಸಿ. ಹಿಂಭಾಗ, ಟೆಲಿಕಾಂ ಲೇಔಟ್, ಶ್ರೀರಾಂಪುರ, ಬೆಂಗಳೂರು ಉತ್ತರ, ಬೆಂಗಳೂರು- 560064 ವಾಸಿಯಾದ ನಾನು, ನನ್ನ ಮಾಲೀಕತ್ವದಲ್ಲಿರುವ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಕುಂದುವಾಡ ರಿ.ಸ.ನಂ. 193/12, ವಿಸ್ತೀರ್ಣ: 00-30 ಗುಂಟೆ ಉಳ್ಳ ಜಮೀನಿನಲ್ಲಿ ದಾಖಲಾಗಿರುವ ಕುಂದುವಾಡ ವಿಭಾಗದ ಡೋರ್ ನಂ. 3651/4, ಅಳತೆ : 34.5x30 ಅಡಿವುಳ್ಳ ಖಾಲಿ ನಿವೇಶನ. ಈ ಹಿಂದೆ ದಿನಾಂಕ: 22.04.2021ರಂದು ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಡಿವಿಜಿ-l- 01517-2021-22 ನಂಬರಾಗಿ ರಿಜಿಸ್ಟ್ರಾರ್ ಆಗಿರುವ ಮೂಲ ಕ್ರಯಪತ್ರದ 3ನೇ ಪುಟವನ್ನು ನಾನು ಇತ್ತೀಚಿಗೆ ಜೆರಾಕ್ಸ್ ಮಾಡಿಸುವಾಗ ದಿನಾಂಕ: 20.05.2024 ರಂದು ಜೆರಾಕ್ಸ್ ಸೆಂಟರ್, ರಾಂ & ಕೋ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ ಇಲ್ಲಿ ಕಳೆದುಕೊಂಡಿರುತ್ತೇನೆ. ಸದರಿ ಮೂಲ ಕ್ರಯಪತ್ರವನ್ನು ಎಷ್ಟು ಹುಡುಕಿದರೂ, ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಸದರಿ ಪತ್ರವು ಯಾರಿಗಾದರೂ ಸಿಕ್ಕಿದ್ದಲ್ಲಿ, ಈ ಕೆಳಗಿನ ವಿಳಾಸಕ್ಕೆ ತಂದುಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಪ್ರವೀಣ್‌ಕುಮಾರ್ ಕಂಪ್ಲಿ ಬೆಲ್ಲದ**
ವಾಸ: #197, 16ನೇ ಕ್ರಾಸ್, ಜೆ.ಎನ್.ಆರ್.ಸಿ. ಹಿಂಭಾಗ,
ಟೆಲಿಕಾಂ ಲೇಔಟ್, ಶ್ರೀ ರಾಂಪುರ, ಬೆಂಗಳೂರು. ಉತ್ತರ ಬೆಂಗಳೂರು-560064.
ಮೊ. : 9008527016, 9538657669, 9739960950

## ಮಹಾನಗರಪಾಲಿಕೆ ಕಾರ್ಯಾಲಯ, ದಾವಣಗೆರೆ
## ಸಾರ್ವಜನಿಕ ಪ್ರಕಟಣೆ

**ದಾಮನಪಾ/ವಕ-2/ಕಂಶಾ/ಸಿಆರ್/07/2024-25 ದಿನಾಂಕ : 3.7.2024**

**ವಿಷಯ: ಡೋರ್ ನಂಬರ್ 692/ಎ-6 ಅಳತೆ 22+26/24x30ರ ಅಳತೆಯನ್ನು 22+26/2x40) ಅಡಿ ಎಂದು ಸರಿಪಡಿಸುವ ಬಗ್ಗೆ.**

ಈ ಮೂಲಕ ದಾವಣಗೆರೆ ಮಹಾನಗರಪಾಲಿಕೆ, ವ್ಯಾಪ್ತಿಗೆ ಒಳಪಟ್ಟ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.29ರ ಕೊಟ್ಟೂರೇಶ್ವರ ಬಡಾವಣೆಯಲ್ಲಿ ಬರುವ ಡೋರ್ ನಂ.692/ಎ-6 ಸ್ವತ್ತಿಗೆ ಸಂಬಂಧಿಸಿದಂತೆ, ದಿನಾಂಕ: 14-03-2024ರಂದು ಅರ್ಜಿ ನೀಡಿ, ಸ್ಥಳದಲ್ಲಿ ಕಂಡುಬಂದಿರುವ ಅಳತೆಯಂತೆ 22+26/2*40 ಎಂದು ಕಛೇರಿ ದಾಖಲೆಗಳಲ್ಲಿ ನಮೂದಿಸಿಕೊಂಡು ಹದ್ದುಬಸ್ತು ಮಾಡಿಸಿ ಇ-ಆಸ್ತಿ ನೀಡಬೇಕೆಂದು ಅರ್ಜಿಯೊಂದಿಗೆ ಕ್ರಯಪತ್ರ, ಇಸಿ, ಆಸ್ತಿ ಹಕ್ಕು ವರ್ಗಾವಣೆ ಮಾಡಿದ ಬಗ್ಗೆ ಹಿಂಬರಹ, ಲಗತ್ತಿಸಿ ಕಛೇರಿ ವಹಿಗಳಲ್ಲಿ ನಮೂದಿಸಿಕೊಳ್ಳಲು ಶ್ರೀ ಶಿವಕುಮಾರ್ ವಿ. ಬಿನ್ ವೆಂಕಟಸುಬ್ಬರಾವ್ ಡಿ.ಬಿ ಅವರು ಕೋರಿರುತ್ತಾರೆ.

ಸದರಿಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಈ ಪ್ರಕಟಣೆ ಹೊರಡಿಸಲಾಗಿದ್ದು, ಕೋರಿರುವ ಡೋರ್ ನಂಬರ್ ಅಳತೆಗೆ ಸಂಬಂಧಿಸಿದಂತೆ ಏನಾದರೂ ತಕರಾರು/ಆಕ್ಷೇಪಣೆಗಳು ಇದ್ದಲ್ಲಿ ತಕರಾರು ರುಜುವಾತು ಪಡಿಸುವಂತಹ ಮೂಲ ದಾಖಲಾತಿಗಳನ್ನು ಒಂದು ವಾರದೊಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ ಮೇಲೆ ತಿಳಿಸಿರುವ ಅಳತೆ ಬಗ್ಗೆ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಭಾವಿಸಿ, ಆಸ್ತಿ ತೆರಿಗೆ ಪಾವತಿಸುವ ಉದ್ದೇಶಕ್ಕಾಗಿ ಸಿವಿಲ್ ವ್ಯಾಜ್ಯಗಳಿಗೆ ಹೊರತು ಪಡಿಸಿ, ಸ್ವತ್ತಿನ ಅಳತೆ 22+26/2x40 ಅಡಿ ಎಂದು ಕೆಎಂಎಫ್-24ರ ವಹಿಯಲ್ಲಿ ನಮೂದಿಸಲಾಗುವುದು ತಿಳಿಯಿರಿ.

**ಸಹಿ/- ವಲಯ ಆಯುಕ್ತರು,**
**ವಲಯ ಕಛೇರಿ-02, ಮಹಾನಗರ ಪಾಲಿಕೆ, ದಾವಣಗೆರೆ.**

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮುಮ್ತಾಜ್‌ಬೀ ಕೋಂ ಇಮಾಂ ಸಾಬ್ (ಮೊ.ನಂ. 78158-77744), ವಾಸ :ಎ.ಆರ್. ಬಸವರಾಜ್ ಮಿಲ್ ಹತ್ತಿರ, ಅಣ್ಣಿಗೇರಿ ವೀರಭದ್ರಪ್ಪ ಬಡಾವಣೆ, ಬೇತೂರು ರಸ್ತೆ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ಪ್ರಕಟಣೆ ಏನೆಂದರೆ.

ಮೇಲ್ಕಂಡ ನನ್ನ ಕಕ್ಷಿದಾರರು ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ. ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಹಿಂದಿನ ಮಾಲೀಕರುಗಳ ನೋಂದಾಯಿತ ಅಸಲು ಕ್ರಯಪತ್ರಗಳಾದ ದಿನಾಂಕ : 4.3.1986ರ ಎಸ್.ಆರ್.ನಂ. 7155/1985-86 ಮತ್ತು ದಿನಾಂಕ : 16.1.1987ರ ಎಸ್.ಆರ್. ನಂ. 5225/1986-87ರ ಮತ್ತು ದಿನಾಂಕ : 17.11.1999ರ ಎಸ್.ಆರ್.ನಂ. 6394/1999-00ರ ಅಸಲು ನೋಂದಾಯಿತ ಕ್ರಯಪತ್ರಗಳನ್ನು ನನ್ನ ಕಕ್ಷಿದಾರರು ದಿನಾಂಕ : 20.6.2024 ರಂದು ಬೇತೂರು ರಸ್ತೆಯಲ್ಲಿರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಲು ಬೈಕ್‌ನಲ್ಲಿ ತೆಗೆದುಕೊಂಡು ಹೋದಾಗ ಆಕಸ್ಮಿಕವಾಗಿ ಮೇಲ್ಕಂಡ ಅಸಲು ಕ್ರಯಪತ್ರಗಳು ಎಲ್ಲೋ ಬಿದ್ದು ಕಳೆದುಹೋಗಿರುತ್ತವೆ. ಸದರಿ ಅಸಲು ಕ್ರಯಪತ್ರಗಳನ್ನು ಸಾಕಷ್ಟು ಬಾರಿ ಹುಡುಕಿದರೂ ಸಿಗದೇ ಇರುವ ಕಾರಣ ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ವಕೀಲರನ್ನಾಗಲೀ ಸಂಪರ್ಕಿಸಿ, ಅವುಗಳನ್ನು ನನ್ನ ಕಕ್ಷಿದಾರರಿಗಾಗಲೀ ಅಥವಾ ವಕೀಲರಿಗಾಗಲೀ ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ. ಸದರಿ ಸ್ವತ್ತಿನ ಬಗ್ಗೆ ಯಾರದೇ ಆಗಲೀ ತಂಟೆ, ತಕರಾರು ಅಥವಾ ಹಕ್ಕು ಹಿತಾಸಕ್ತಿ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 7 ದಿನಗಳೊಳಗಾಗಿ ಕೂಡಲೇ ಕೆಳಕಂಡ ವಕೀಲರನ್ನು ಅಥವಾ ನನ್ನ ಕಕ್ಷಿದಾರರನ್ನು ಸಂಪರ್ಕಿಸಬೇಕಾಗಿ ಈ ಮೂಲಕ ಪ್ರಕಟಿಸಲಾಗಿದೆ. **ಷೆಡ್ಯೂಲ್ : 1) ದಾವಣಗೆರೆ ಸಿಟಿ, ಅಣ್ಣಿಗೇರಿ ವೀರಭದ್ರಪ್ಪ ನಗರ, ಬೇತೂರು ರಸ್ತೆಯಲ್ಲಿ ಬರುವ ಸೈಟ್ ನಂ. 41, ಡೋರ್ ನಂ. 217/41ರಲ್ಲಿ ವಿಸ್ತೀರ್ಣ 24x10ವುಳ್ಳ ವಾಸೋಪಯೋಗಿ ಮನೆಗೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ ;ಸೈಟ್ ನಂ. 35, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸೈಟ್ ನಂ. 42**

**ಸಹಿ/- ಆರ್.ಟಿ. ವಿನಯ್‌ಕುಮಾರ್, ವಕೀಲರು**
**# 82/18,1ನೇ ಮಹಡಿ, ಅರುಣ ಟಾಕೀಸ್ ಹತ್ತಿರ,**
**ಪಿ.ಬಿ. ರೋಡ್, ದಾವಣಗೆರೆ. ಫೋ. : 98445 97838**

# ಹತ್ರಾಸ್ ಕಾಲ್ತುಳಿತದ ಹಿಂದೆ ಸಂಚಿನ ಸಾಧ್ಯತೆಯ ತನಿಖೆ

ಹತ್ರಾಸ್, ಜು. 3 - ಕಾಲ್ತುಳಿತಕ್ಕೆ ಸಿಲುಕಿ 121 ಜನರು ಸಾವನ್ನಪ್ಪಿರುವ ಪ್ರಕರಣದ ಹಿಂದೆ ಸಂಚಿನ ಸಾಧ್ಯತೆ ಇದೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ.

ಸತ್ಸಂಗದ ವೇಳೆ ಕಾಲ್ತುಳಿತ ಉಂಟಾಗಿ ನೂರಕ್ಕೂ ಹೆಚ್ಚು ಜನರು ಸಾವನ್ನಪ್ಪಿರುವ ಬಗ್ಗೆ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ. ಫುಲ್‌ಹಾರಿ ಹಳ್ಳಿಯ ಬಳಿ ಸತ್ಸಂಗದಲ್ಲಿ 2.5 ಲಕ್ಷ ಜನರು ಪಾಲ್ಗೊಂಡಿದ್ದರು ಎಂದು ಹೇಳಲಾಗಿದೆ. ಆದರೆ, ಕೇವಲ 80,000 ಜನರಿಗೆ ಮಾತ್ರ ಅನುಮತಿ ಪಡೆಯಲಾಗಿತ್ತು.

ಭೋಲೇ ಬಾಬಾ ಅವರ ಪರ ವಕೀಲ ಎ.ಪಿ. ಸಿಂಗ್ ಹೇಳಿಕೆ ನೀಡಿದ್ದು, ತನಿಖೆಗಾಗಿ ಆಡಳಿತಕ್ಕೆ ನೆರವು ನೀಡಲು ಭೋಲೇ ಬಾಬಾ ಸಿದ್ಧವಾಗಿದ್ದಾರೆ. ಕೆಲ ಸಮಾಜ ವಿರೋಧಿ ಶಕ್ತಿಗಳು ಈ ಸಂಚಿನಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದ್ದಾರೆ.

ಮುಖ್ಯ ಸೇವಾದಾರ ದೇವಪ್ರಕಾಶ್ ಮಧುಕರ್ ಹಾಗೂ ಇತರೆ ಆಯೋಜಕರ ವಿರುದ್ಧ ಪೊಲೀಸರು ಸಿಕಂದರ್ ರಾವ್ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿದ್ದಾರೆ.

ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲಾಗುವುದು. ಈ ತಂಡದಲ್ಲಿ ನಿವೃತ್ತ ಪೊಲೀಸರು ಹಾಗೂ ಅಧಿಕಾರಿಗಳು ಇರಲಿದ್ದಾರೆ. ಇದು ಅಪಘಾತವಲ್ಲದಿದ್ದರೆ ಯಾರು ಸಂಚು ನಡೆಸಿದ್ದಾರೆ ಎಂಬ ಎಲ್ಲ ವಿಷಯಗಳ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಆದಿತ್ಯನಾಥ್ ಹೇಳಿದ್ದಾರೆ.

ಈ ನಡುವೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಎರಡು ಅರ್ಜಿಗಳು ದಾಖಲಾಗಿವೆ. ಸುಪ್ರೀಂಕೋರ್ಟ್‌ನಲ್ಲಿ ವಕೀಲರೊಬ್ಬರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದು, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಯಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಈ ನಡುವೆ, ಅಲಹಾಬಾದ್ ಹೈಕೋರ್ಟ್‌ನಲ್ಲಿ ಸಿ.ಬಿ.ಐ. ತನಿಖೆ ನಡೆಸಬೇಕೆಂದು ಕೋರಿ ಮತ್ತೊಂದು ಅರ್ಜಿ ದಾಖಲಿಸಲಾಗಿದೆ.

ಆದರೆ ಆದಿತ್ಯನಾಥ್ ಅವರ ಹೇಳಿಕೆ ಹಾಗೂ ಪೊಲೀಸರು ದಾಖಲಿಸಿರುವ ಎಫ್.ಐ.ಆರ್.ನಲ್ಲಿ ಸ್ಥಳೀಯ ಆಡಳಿತಕ್ಕೆ ಕ್ಲೀನ್ ಚಿಟ್ ನೀಡಿರುವಂತೆ ಕಂಡುಬರುತ್ತಿದೆ. ಸತ್ಸಂಗದ ಆಯೋಜಕರಾಗಿದ್ದ ಸೇವಾದಾರರೇ ಅವಘಡಕ್ಕೆ ಕಾರಣ ಎಂದು ಆರೋಪಿಸಲಾಗಿದೆ. ಕಾರ್ಯಕ್ರಮದ ಆಯೋಜಕರು ಎಷ್ಟು ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಲಿದ್ದಾರೆ ಎಂಬುದನ್ನು ಮುಚ್ಚಿಟ್ಟಿದ್ದರು.

ಜನರ ಚಪ್ಪಲಿ ಹಾಗೂ ಅವರಿಗೆ ಸಂಬಂಧಿಸಿದ ಇತರೆ ವಸ್ತುಗಳನ್ನು ಹತ್ತಿರದ ಮೈದಾನಗಳಲ್ಲಿ ಎಸೆದಿದ್ದರು ಎಂದು ಆರೋಪಿಸಲಾಗಿದೆ.

ಪೊಲೀಸರು ಹಾಗೂ ಸ್ಥಳೀಯ ಆಡಳಿತ ಸಾಧ್ಯವಿರುವ ಎಲ್ಲ ಸಂಪನ್ಮೂಲ ಬಳಸಿ ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ನಡೆಸಿದರು. ಆದರೆ ಸಂಘಟಕರು ಹಾಗೂ ಸೇವಾದಾರರು ಸಹಕಾರ ನೀಡಲಿಲ್ಲ ಎಂದು ತಿಳಿಸಲಾಗಿದೆ.

# ಪಠ್ಯದಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯ ಸೇರಿಸಲು ಮನವಿ



ಬೆಂಗಳೂರು, ಜು.3- ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಕಾಡೆಮಿಕ್ ಸಮಿತಿಯು ಬಿ.ಕಾಂ ಪದವಿಯ ಪಠ್ಯಕ್ರಮದಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯ ಸೇರಿಸಬೇಕು ಎಂದು ವಿವಿಯ ಕುಲಪತಿಗಳಿಗೆ, ಪ್ರದೇಶ ಕಾಂಗ್ರೆಸ್ ಸಮಿತಿಯ ಶಿಕ್ಷಕರು ಹಾಗೂ ಪದವೀಧರ ಘಟಕದ ಮಾಜಿ ರಾಜ್ಯಾಧ್ಯಕ್ಷ ಡಾ.ಆರ್.ಎಂ ಕುಬೇರಪ್ಪ ಒತ್ತಾಯಿಸಿದ್ದಾರೆ.

ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿವಿಗೆ ಮಂಗಳವಾರ ಭೇಟಿ ನೀಡಿ ಅಲ್ಲಿನ ಕುಲಪತಿಗಳು, ಡೀನ್‌ಗಳು, ಛೇರ್ಮನ್ ಮತ್ತು ಇತರೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಇತ್ತೀಚಿನ ದಿನಗಳಲ್ಲಿ ಪದವೀಧರರಿಗೆ ಕಂಪ್ಯೂಟರ್ ಸೈನ್ಸ್ ಜ್ಞಾನ ಇಲ್ಲದಿದ್ದರೆ ಅಂತಹವರು ಉದ್ಯೋಗಕ್ಕೆ ಅರ್ಹತೆಯನ್ನೇ ಪಡೆಯುವುದಿಲ್ಲ. ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಲಿದೆ. ಆದ್ದರಿಂದ ಕಂಪ್ಯೂಟರ್ ಸೈನ್ಸ್ ವಿಷಯ ಸೇರಿಸಲು ಮನವಿ ಮಾಡಿದಾಗ ಅಧಿಕಾರಿಗಳು ಮನವಿಗೆ ಸ್ಪಂದಿಸಿದ್ದಾರೆ.

ಬಿ.ಕಾಂ ವಿದ್ಯಾರ್ಥಿಗಳಿಗೆ ಪ್ರಥಮ ಸೆಮಿಸ್ಟರ್‌ನಿಂದ ಅಂತಿಮ ಸೆಮಿಸ್ಟರ್ ವರೆಗೆ ಕಡ್ಡಾಯವಾಗಿ ಅರ್ಥಶಾಸ್ತ್ರ ವಿಷಯ ಬೋಧನೆ ಮಾಡಲೇಬೇಕು ಎಂದು ಚರ್ಚಿಸಿದಾಗ ತಕ್ಷಣಕ್ಕೆ ಸ್ಪಂದಿಸಿದ ಅಧಿಕಾರಿಗಳು ಅರ್ಥಶಾಸ್ತ್ರ ವಿಷಯವನ್ನು ಕಡ್ಡಾಯ ಪತ್ರಿಕೆ ಮಾಡಿ ಪಠ್ಯಕ್ರಮದಲ್ಲಿ ಸೇರಿಸಲಾಗಿದೆ ಎಂದು ವಿ.ವಿ. ಅಧಿಕಾರಿಗಳು ತಿಳಿಸಿದ್ದಾರೆ.

ಪದವಿ ತರಗತಿಗಳಲ್ಲಿ ಎಲ್ಲಾ ವಿಷಯಗಳ ಬೋಧನಾ ಅವಧಿಯನ್ನು ವಾರಕ್ಕೆ ಆರು ಅವಧಿ ಮಾಡಿ ಕಾರ್ಯಭಾರ ಹೆಚ್ಚಿಸಲು ತಾವು ಒತ್ತಾಯಿಸಿದಾಗ ಮುಂಬರುವ ಬಿಒಎಸ್ ಸಭೆಯಲ್ಲಿ ಕಾರ್ಯಭಾರ ಹೆಚ್ಚಿಸುವುದಾಗಿ ವಿವಿ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

# ಮನ್ ಕೀ ಬಾತ್ ನಲ್ಲಿ ಪ್ರಧಾನಿ ಮೋದಿ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡಲಿ

ದಾವಣಗೆರೆ, ಜು.3- ಮನ್ ಕೀ ಬಾತ್ ಅಂದರೆ ಮಾನದಾಳದ ಮಾತು. ದೇಶದ ಜನರ ಹೃದಯಕ್ಕೆ ಹತ್ತಿರವಾದ ಪ್ರಚಲಿತ ಜ್ವಲಂತ ಸಮಸ್ಯೆಗಳ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾತನಾಡಬೇಕು. ಅದು ಬಿಟ್ಟು ಕೆಲಸಕ್ಕೆ ಬಾರದ ವಿಚಾರಗಳನ್ನು ಮನ್ ಕೀ ಬಾತ್ ನಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲವೆಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಮೋದಿಯವರನ್ನು ತೀವ್ರವಾಗಿ ಟೀಕಿಸಿದ್ದಾರೆ.

ಸಮಾಜದ ಮೇಲೆ ಬೆಳುಕು ಚಲ್ಲುವಂತಹ ವಿಚಾರಗಳನ್ನು ಮಾತನಾಡುವುದನ್ನು ಮೋದಿ ಕಲಿಯಬೇಕು ಎಂದು ಅವರು ಮೋದಿಯ ಮನ್ ಕೀ ಬಾತ್ ಅನ್ನು ಖಂಡಿಸಿದ್ದಾರೆ. 24 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ಸ್ನಾತಕೋತ್ತರ ನೀಟ್ ಸೋರಿಕೆ ಬಗ್ಗೆ, ತಮ್ಮ ಸರ್ಕಾರದ ವೈಫಲ್ಯದ ಬಗ್ಗೆ ಮಾತನಾಡಲಿ ಎಂದಿದ್ದಾರೆ.

ಮೋದಿ ನಿರ್ಮಿತ ದೆಹಲಿ, ಗುಜರಾತ್ ಹಾಗೂ ಯುಪಿ ವಿಮಾನ ನಿಲ್ದಾಣಗಳ ಮೇಲ್ ಚಾವಣಿ ಕುಸಿತದ ಬಗ್ಗೆ ಮೋದಿ ಉತ್ತರಿಸಲಿ. ಅಯೋಧ್ಯೆಯ ರಾಮಪಥದ 10 ರಸ್ತೆಗಳನ್ನು 850 ಕೋಟಿ ಗಳ ಮೊತ್ತದಲ್ಲಿ ನಿರ್ಮಾಣದ ಕುಸಿತದ ಬಗ್ಗೆ ಮಾತಾಡಲಿ. ಆದರ್ಶ ಪುರುಷ ಶ್ರೀ ರಾಮನ ಗರ್ಭಗುಡಿ ಸೋರಿಕೆಯ ಬಗ್ಗೆ ಯಾಕೆ ಮೋದಿ ಮನ್ ಕೀ ಬಾತ್ ನಲ್ಲಿ ಮಾತನಾಡಲ್ಲ. ಮೋದಿ ತೋರಿಕೆಗಾಗಿ ತರಾತುರಿಯಲ್ಲಿ ಲೋಕಸಭಾ ಚುನಾವಣೆಯ ದೃಷ್ಟಿಯಿಂದ ಜನರ ತೆರಿಗೆ ಹಣವನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡಿ ನಿರ್ಮಿಸಿದ ಅಭಿವೃದ್ಧಿ ಕಾಮಗಾರಿಗಳು ಕಳಪೆಯಾಗಿವೆ. ಅವರ ಆಡಳಿತವು ಕಳಪೆ ಆಗಿದೆ ಎಂದು ಬಸವರಾಜ್ ಕಿಡಿಕಾರಿದ್ದಾರೆ.

# ರೋಟರಿ, ಇನ್ನರ್‌ವ್ಹೀಲ್ ಸಂಸ್ಥೆಯಿಂದ ವೈದ್ಯರ ದಿನಾಚರಣೆ, ವೈದ್ಯಕೀಯ ಶಿಬಿರ



ದಾವಣಗೆರೆ, ಜು. 3- ರೋಟರಿ ಮತ್ತು ಇನ್ನರ್‌ವ್ಹೀಲ್ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಈಚೆಗೆ ವೈದ್ಯರ ದಿನಾಚರಣೆ ಮತ್ತು ಉಚಿತ ವೈದ್ಯಕೀಯ ಶಿಬಿರ ಹಾಗೂ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ಡಾ. ಅವಿನಾಶ್, ಡಾ. ವಿಂಧ್ಯಾ ಗಂಗಾಧರ ವರ್ಮ, ಗಂಗಾಧರ ವರ್ಮ, ಶ್ರೀಮತಿ ರಾಮರಾಜು ಅವರು ಉಪಸ್ಥಿತರಿದ್ದರು. ಸಭೆಯಲ್ಲಿ ಎರಡೂ ಸಂಸ್ಥೆಯ ಅಧ್ಯಕ್ಷರಾದ ಮುನುವಳ್ಳಿ, ಪ್ರೇಮ ಮಹೇಶ್ವರಪ್ಪ ಹಾಗೂ ಕಾರ್ಯದರ್ಶಿಗಳಾದ ಅಂಜನಮೂರ್ತಿ, ಭಾಗ್ಯ ವೀರಣ್ಣ ಭಾಗವಹಿಸಿದ್ದರು.

## ತೊಗಟವೀರ ಸಮಾಜ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಜು. 3- ನಗರದ ತೊಗಟವೀರ ಸಮಾಜದ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ತೊಗಟವೀರ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 80 ಕ್ಕಿಂತ ಅಧಿಕ ಅಂಕ ಪಡೆದ, ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಶೇ.75 ಕ್ಕಿಂತ ಹೆಚ್ಚು ಅಂಕ ಪಡೆದ ಅರ್ಹ ವಿದ್ಯಾರ್ಥಿಗಳು ಆಗಸ್ಟ್ 1 ರೊಳಗಾಗಿ ಶ್ರೀ ತೊಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್ (ತೊಗಟವೀರ ಸಮುದಾಯ ಭವನ) ಇವರಿಗೆ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ. ವಿವರಕ್ಕೆ ಸಂಪರ್ಕಿಸಿ : ಶ್ರೀಧರಮೂರ್ತಿ (9743098298).

# ಬ್ರಿಟನ್ ಚುನಾವಣೆಯಲ್ಲಿ ಭಾರತೀಯ ಮೂಲದವರ ಹೆಚ್ಚಿನ ಆಯ್ಕೆ ಸಾಧ್ಯತೆ

ಲಂಡನ್, ಜು. 3 - ಬ್ರಿಟನ್‌ನಲ್ಲಿ ಗುರುವಾರ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ವೈವಿಧ್ಯಮಯ ಜನಪ್ರತಿನಿಧಿಗಳು ಆಯ್ಕೆಯಾಗುವ ಸಾಧ್ಯತೆ ಇದೆ. ಭಾರತೀಯ ಮೂಲದ ಜನಪ್ರತಿನಿಧಿಗಳ ಸಂಖ್ಯೆ ಹೆಚ್ಚಳವಾಗುವ ಸಾಧ್ಯತೆಯೂ ಇದೆ.

ಬ್ರಿಟನ್ ಫ್ಯೂಚರ್ ಸಂಸ್ಥೆಯ ವಿಶ್ಲೇಷಣೆಯ ಪ್ರಕಾರ ಲೇಬರ್ ಪಾರ್ಟಿಯು ಅಧಿಕಾರಕ್ಕೆ ಬಂದರೆ ಇಲ್ಲವೇ ದೊಡ್ಡ ಪ್ರಮಾಣದ ಬಹುಮತ ಪಡೆದರೆ ಅತಿ ಹೆಚ್ಚು ಜನಾಂಗೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರನ್ನು ಪಡೆಯಲಿದೆ.

ಈ ಬಾರಿ ಜನಾಂಗೀಯ ಅಲ್ಪಸಂಖ್ಯಾತ ಹಿನ್ನೆಲೆಯ ಶೇಕಡ 14 ರಷ್ಟು ಸಂಸದರು ಆಯ್ಕೆಯಾದರೆ ಅದು ಬ್ರಿಟನ್ ಮತದಾರರ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಹತ್ತಿರಕ್ಕೆ ಬರಲಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

ಈ ಚುನಾವಣೆಯಲ್ಲಿ ಜನಾಂಗೀಯ ಅಲ್ಪಸಂಖ್ಯಾತರು ಅತಿ ಹೆಚ್ಚಿನ ಪ್ರಾತಿನಿಧ್ಯ ಪಡೆಯಲಿದ್ದಾರೆ. ಸಂಸತ್ತು ಹಿಂದೆಂದಿಗಿಂತಲೂ ವೈವಿಧ್ಯಮವಾಗಿರಲಿದೆ ಎಂದು ಬ್ರಿಟಿಷ್ ಫ್ಯೂಚರ್ ನಿರ್ದೇಶಕ ಸುಂದರ ಕತ್ವಾಲ ಹೇಳಿದ್ದಾರೆ.

ಕಳೆದ 40 ವರ್ಷಗಳಲ್ಲಿ ಬ್ರಿಟನ್ ಅತ್ಯಂತ ವೇಗವಾಗಿ ವೈವಿಧ್ಯಮಯ ಹಿನ್ನೆಲೆಯ ಜನಪ್ರತಿನಿಧಿಗಳನ್ನು ಹೊಂದುತ್ತಿದೆ. ಇದು ನಮ್ಮೆಲ್ಲರ ಯೋಚನೆಗಿಂತ ಹೆಚ್ಚು ವೇಗವಾಗಿ ಆಗಿರುವ ಬೆಳವಣಿಗೆ ಎಂದು ಕತ್ವಾಲ ಹೇಳಿದ್ದಾರೆ.

ಕಳೆದ 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತೀಯ ಹಿನ್ನೆಲೆಯ 15 ಸಂಸದರು ಆಯ್ಕೆಯಾಗಿದ್ದರು. ಇವರಲ್ಲಿ ಹಲವರು ಮೊದಲ ಬಾರಿಗೆ ಸ್ಪರ್ಧಿಸಿದವರಾಗಿದ್ದರು. ಹಲವು ಬ್ರಿಟಿಷ್ ಭಾರತೀಯರು ಈ ಬಾರಿ ಮರು ಚುನಾವಣೆ ಬಯಸುತ್ತಿಲ್ಲ. ಇಸ್ಲಿಂಗ್ಟನ್ ಉತ್ತರ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಪ್ರಫುಲ್ ನರಗುಂದ್ ಅವರು ಚುನಾವಣಾ ಕಣದಲ್ಲಿ ಗಮನ ಸೆಳೆದಿದ್ದಾರೆ.

ಬ್ಯಾಗಿ ಶಂಕರ್ ಅವರು ಡರ್ಬಿ ಸೌತ್, ಸತ್ವೀರ್ ಕೌರ್ ಅವರು ಸೌತ್ ಹ್ಯಾಂಪ್ಟನ್, ಹರ್‌ಪ್ರೀತ್ ಉಪ್ಪಲ್ ಅವರು ಹಡ್ಡರ್ಸ್‌ಫೀಲ್ಡ್ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಬ್ರಿಟನ್ ಪ್ರಧಾನ ಮಂತ್ರಿ ರಿಷಿ ಸುನಕ್ ಅವರು ರಿಚ್ಮಂಡ್ ಮತ್ತು ನಾರ್ತಲರ್ಟನ್ ಕ್ಷೇತ್ರದಿಂದ ಕಣದಲ್ಲಿದ್ದಾರೆ. ಅವರ ಸಂಪುಟದ ಮಾಹಿತಿಯ ಮಾಜಿ ಸಹೋದ್ಯೋಗಿ ಪ್ರೀತಿ ಪಟೇಲ್ ಅವರು ವಿಥ್ಯಾಮ್ ಮತ್ತು ಸುಯಲ್ಲ ಬ್ರೇವರ್‌ಮಾನ್ ಅವರು ಫೇರ್‌ಹ್ಯಾಮ್ ಕ್ಷೇತ್ರದಿಂದ ಕಣದಲ್ಲಿದ್ದಾರೆ.

# ಚಾರ್ಟರ್ಡ್ ಅಕೌಂಟೆಂಟ್ಸ್ ಭವನದಲ್ಲಿ ರಕ್ತದಾನ ಶಿಬಿರ



ದಾವಣಗೆರೆ, ಜು.3- ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್ ವತಿಯಿಂದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ಸೋಮವಾರ ಚಾರ್ಟರ್ಡ್ ಅಕೌಂಟೆಂಟ್ಸ್ ದಿನದ ಪ್ರಯುಕ್ತ ಚಾರ್ಟರ್ಡ್ ಅಕೌಂಟೆಂಟ್ಸ್ ಭವದಲ್ಲಿ ರಕ್ತದಾನ ಶಿಬಿರ ನಡೆಯಿತು.

ಈ ಶಿಬಿರದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಸಿಎ ಉಮೇಶ್ ಶೆಟ್ಟಿ, ಡಿ.ಎನ್. ಶಿವಾನಂದ, ಪೊನ್ನಲಾಲ್, ಕೊಟ್ರೇಶ್, ವೈದ್ಯಾಧಿಕಾರಿ ಡಾ.ಪಿ.ಕೆ. ಬಸವರಾಜ್, ರಕ್ತ ನಿಧಿ ಕೇಂದ್ರದ ಸಂಯೋಜಕ ಎನ್.ಜಿ. ಶಿವಕುಮಾರ, ಅಸೋಸಿಯೇಷನ್ ಅಧ್ಯಕ್ಷ ಸಿಎ. ಕಿರಣ್, ಎಲ್. ಪಾಟೀಲ್, ಗೌರವಾಧ್ಯಕ್ಷ ಅಥಣಿ. ಎಸ್. ವೀರಣ್ಣ, ಕಾರ್ಯದರ್ಶಿ ಉಮೇಶ್ ಶೆಟ್ಟಿ, ಖಜಾಂಜಿ ಲಿಂಗರಾಜ್, ಮಾಜಿ ಅಧ್ಯಕ್ಷ ಬಸವರಾಜ್ ಒಡೆಯರ್, ಕಿರಣ್ ಕುಮಾರ್, ಗಿರೀಶ್ ನಾಡಿಗ್, ವಿಜಯ್ ಕುಮಾರ್, ಮಹೇಶ್ ಶೆಂಡಿಗೆ, ಪ್ರಯೋಗ ಶಾಲಾ ಮೇಲ್ವಿಚಾರಕ ಆರ್. ವಿನಾಯಕ, ತಂತ್ರಜ್ಞ ಕೆ. ಗಿರೀಶ್, ಸಂಘದ ಸದಸ್ಯರು, ಸಿಎ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಇದ್ದರು.

# ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಪೆನ್ ವಿತರಣೆ




ಮಲೇಬೆನ್ನೂರು, ಜು. 3- ಬೆಳಲಗೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಕೆಡಿಪಿ ಫೌಂಡೇಶನ್ ವತಿಯಿಂದ ಸಂಸ್ಥೆಯ ತಿಪ್ಪೇಶ್, ಶಶಿಕುಮಾರ್, ರಮೇಶ್ ಅವರುಗಳು ನೋಟ್ ಬುಕ್ ಮತ್ತು ಪೆನ್ನು ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕ ಕರಿಬಸಪ್ಪ, ಸಿಆರ್‌ಪಿ ಹನುಮಂತಪ್ಪ, ಸೇವಾದಳದ ಜಿಲ್ಲಾ ಸಂಘಟಕ ಪಕ್ಕೀರಗೌಡ, ಕೆ.ಟಿ. ಜಯಪ್ಪ, ಕೆ.ಸಿ. ಚಂದ್ರಪ್ಪ, ಟಿ.ಎಸ್. ಬಸವರಾಜ್ ಮತ್ತು ಶಾಲಾ ಶಿಕ್ಷಕರು ಹಾಜರಿದ್ದರು.

# ಗಂಗನರಸಿಯಲ್ಲಿ ನಾಳೆ ಮಣ್ಣೆತ್ತಿನ ಅಮಾವಾಸ್ಯೆ ವಿಶೇಷ ಪೂಜೆ

ಹರಿಹರ, ಜು. 3 - ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಹೊರ ಮಠದಲ್ಲಿ ಮಣ್ಣೆತ್ತಿನ ಅಮಾವಾಸ್ಯೆಯ ವಿಶೇಷ ಪೂಜಾ ಕಾರ್ಯಕ್ರಮಗಳು ನಾಡಿದ್ದು 5ರ ಶುಕ್ರವಾರ ಬೆಳಿಗ್ಗೆ 11ಕ್ಕೆ ನಡೆಯಲಿವೆ.

ಬೆಳಿಗ್ಗೆ 11 ಗಂಟೆಗೆ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಮಾವಾಸ್ಯೆಯ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆ ಜರುಗುವುದು.

ಸಂಕಪ್ಪರ ಶ್ರೀಮತಿ ರಂಗಮ್ಮ ಲೇ. ಬಸಪ್ಪ, ಶ್ರೀಮತಿ ಕಲ್ಪನ ಶ್ರೀಮತಿ ಪೂರ್ಣಿಮಾ ಮತ್ತು ಮಕ್ಕಳು, ತಳವಾರ ಕೇರಿ, ದಾವಣಗೆರೆ ಇವರು ಪ್ರಸಾದ ವ್ಯವಸ್ಥೆ ಏರ್ಪಡಿಸಿದ್ದಾರೆ. ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿ ಆಶ್ರಯದಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದು ಅಧ್ಯಕ್ಷ ಜಿ.ಎಂ. ನಾಗೇಂದ್ರಪ್ಪ, ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆ ಪಶ್ಚಿಮ 30x50, ಜೆ.ಹೆಚ್. ಪಟೇಲ್ ಬಡಾವಣೆ, ಪೂರ್ವ 30x50, ಶಿವ ಪಾರ್ವತಿ ಬಡಾವಣೆ ಪೂರ್ವ 30x55 ಅಕ್ಕ-ಪಕ್ಕ, ಪಶ್ಚಿಮ 30x40 ಅಕ್ಕ-ಪಕ್ಕ, ಪೂರ್ವ 40x60.
ಐಗೂರು ವಿಜಯಕುಮಾರ್
99457 02495

**ಬಂಗ್ಲೆ ಸೈಟುಗಳು ಮಾರಾಟಕ್ಕಿವೆ**
90x90 North, 80x60 North, 90x83 ಕಾರ್ನರ್, 65x147 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**OM SAI HOME PRODUCTS**
ನಮ್ಮ ಮನೆಯಲ್ಲೇ ತಯಾರಿಸಿದ ಅನೇಕ ಮಸಾಲೆ ಪದಾರ್ಥಗಳು, ಸಾಂಬಾರ್ ಪುಡಿ, ಪುಳಿಯೋಗರೆ ಪುಡಿ, ಕಾರದಪುಡಿ, ಗರಮ್ ಇನ್ನು ಅನೇಕ ಪೌಡರ್‌ಗಳು ದೊರೆಯುತ್ತವೆ. ಬೇರೆ ಊರುಗಳಿಗೆಲ್ಲಾ ಕೋರಿಯರ್ ಮಾಡಲಾಗುತ್ತದೆ.
ಸಂಪರ್ಕಿಸಿ : 91102 74329

**ಮಳಿಗೆ ಮತ್ತು ಗೋಡೌನ್ ಬಾಡಿಗೆಗೆ**
60 ಅಡಿ ರಸ್ತೆಗೆ ಲಗತ್ತಾಗಿರುವ DHM ಚರ್ಚ್ ಪಕ್ಕ ಎಸ್.ಎಸ್. ಆಸ್ಪತ್ರೆ ರಸ್ತೆಯಲ್ಲಿನ ಮಳಿಗೆ ಅಟ್ಯಾಚ್ ಗೋಡೌನ್ ಬಾಡಿಗೆಗೆ ದೊರೆಯುತ್ತದೆ.
99451 73237

**ಅಕೌಂಟೆಂಟ್ ಬೇಕಾಗಿದ್ದಾರೆ**
with experience
Qualification - PUC
New Bagyalakshmi And Co.
80504 01612

**Property Hub**
ಕರ್ನಾಟಕದ ಎಲ್ಲ ಜಿಲ್ಲೆ, ತಾಲ್ಲೂಕ್ ಮತ್ತು ಹಳ್ಳಿಗಳ EC / ಇಸಿ ಮತ್ತು Certified copy / ದೃಢೀಕೃತ ಪ್ರತಿಗಾಗಿ ನಮ್ಮನ್ನು ಸಂಪರ್ಕಿಸಿ
96118 66449

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
KMP ವೈರ್ಸ್ ಆಂಡ್ ಕೇಬಲ್ಸ್
94484 43009

**ಮಾರಾಟ/ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆ ಮಾರಾಟ/ ಬಾಡಿಗೆಗೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
98800 32999
Whatsapp :
+91 79755 95836

**ಹರಿಹರದಲ್ಲಿ ಸೈಟುಗಳು ಮಾರಾಟಕ್ಕಿವೆ**
ಹರಿಹರದ ವಿನಾಯಕ ಬಡಾವಣೆಗೆ ಹತ್ತಿಕೊಂಡು ಇರುವ ಸೇವಾಲಾಲ್ ಬಡಾವಣೆಯಲ್ಲಿ ಸೈಟುಗಳು ದೊರೆಯುತ್ತವೆ. ಸಂಪರ್ಕಿಸಿ:
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ : 97424 34049

**Tele Caller**
(Attractive Salary + incentives)
99645 46667
89700 66666

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರಸ್ತೆಗೆ ಹತ್ತಿರದಲ್ಲಿ ಇಂಡಸ್ಟ್ರೀಯಲ್-ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ :9742434049

**ಲೀಸ್‌ಗೆ ಇದೆ**
ವಸಂತ ರಸ್ತೆ, ವಸಂತ ಟಾಕೀಸ್ ಎದುರು, ಬಾಬಾ ರಾಮದೇವ್ ಹೋಟೆಲ್ ಪಕ್ಕದ 12x25 ಅಡಿವುಳ್ಳ ಮಳಿಗೆ ಲೀಸ್‌ಗೆ ಇದೆ. ಆಸಕ್ತರು ಸಂಪರ್ಕಿಸಿ.
78490 74084, 98440 87164

**ಸೈಟುಗಳು ಮಾರಾಟಕ್ಕಿವೆ**
ಹರಿಹರ ಅಮರಾವತಿಯ ಕರ್ನಾಟಕ ಗೃಹ ಮಂಡಳಿ ಮತ್ತು ಹೌಸಿಂಗ್ ಕಾಲೋನಿ ಪಕ್ಕದ ಹೆಚ್.ಆರ್.ಎಂ. ಬಡಾವಣೆಯಲ್ಲಿ ಪೂರ್ವ ಪಶ್ಚಿಮದ 30x40 ಅಳತೆಯ ಸೈಟುಗಳು ನೇರ ಮಾಲೀಕರಿಂದ ಮಾರಾಟಕ್ಕಿವೆ.
98809 33630

**ಶಿಕ್ಷಕಿಯರು / ಶಿಕ್ಷಕರು ಬೇಕಾಗಿದ್ದಾರೆ**
B.Sc, B.Ed - PCM - 02, CBZ - 01, B.Ed - Eng / Sci / Soci - 01, ಕ್ಲರ್ಕ್ - 01 ಸಂಪರ್ಕಿಸಿ.
SMS ಕಾನ್ವೆಂಟ್ ರಾಜೀವ್ ಗಾಂಧಿ ಬಡಾವಣೆ, RTO ಕಛೇರಿ ಹತ್ತಿರ, ದಾವಣಗೆರೆ.
98447 35946, 96631 95531

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಕ್ಯಾನ್ಸರ್, ಸ್ಟ್ರೋಕ್, ಡಿಪ್ರೆಶನ್, ಸ್ಕಿಜೋಫ್ರೇನಿಯಾ, ಮಾಟ ಮಂತ್ರ, ಭೂತ, ಪ್ರೇತಗಳ ಭಯ ಹಾಗೂ ನಿಮ್ಮ ಅನೇಕ ಸಮಸ್ಯೆಗಳ ಮೂಲ ಹಿಂದಿನ ಜನ್ಮಗಳ ದೋಶಗಳಿಗೆ ರಾಮಬಾಣ ಚಿಕಿತ್ಸೆ
8073342011
(ವ್ಯಕ್ತಿ ಎಷ್ಟೇ ದೂರದಲ್ಲಿದ್ದರೂ distance heeling ಮಾಡುತ್ತೇವೆ)

**ನುರಿತ ದೋಸೆ ಭಟ್ಟರು ಬೇಕಾಗಿದ್ದಾರೆ**
ಸಂಪರ್ಕಿಸಿ :
88849 55559
94834 37363

**ಫ್ರಾಂಚೈಸಿ (Franchise)**
ದಾವಣಗೆರೆ, ಚಿತ್ರದುರ್ಗ, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಆನ್‌ಲೈನ್ ಶಾಪಿಂಗ್ ಪಾರ್ಸಲ್ ಡಿಲೇವರಿ ಮಾಡಲು ಫ್ರಾಂಚೈಸಿ ಹೋಲ್ಡರ್‌ಗಳು ಬೇಕಾಗಿದ್ದಾರೆ. ತಿಂಗಳಗೆ 2 ಲಕ್ಷ ದುಡಿಯುವ ಅವಕಾಶ ಆಸಕ್ತಿಯುಳ್ಳವರು ಕೂಡಲೇ ಸಂಪರ್ಕಿಸಿ.
99022 25186

**3BHK ಮನೆ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್‌ನಲ್ಲಿ 3 ರೂಂ, 2 ದೊಡ್ಡ ಹಾಲ್ ಇರುವ ಮನೆ ಬಾಡಿಗೆಗೆ ಇದೆ. ವಾಸಕ್ಕೆ, ಆಫೀಸ್, ಪಾಲಿ ಕ್ಲಿನಿಕ್, PG, ಶೋ ರೂಂ, ನಡೆಸುವವರಿಗೆ ಅನುಕೂಲವಾಗಿದೆ. ಆಸಕ್ತಿಯುಳ್ಳವರು ಸಂಪರ್ಕಿಸಿ.
98441 16813, 99008 92750

**ಮರದ ರ್‍ಯಾಕ್ಸ್ ಮಾರಾಟಕ್ಕಿದೆ**
ಫ್ಯಾನ್ಸಿ ಸ್ಟೋರ್ ಮತ್ತು ಮೆಡಿಕಲ್ ಸ್ಟೋರ್‌ಗೆ ಬೇಕಾಗುವ ಮರದ ರ್‍ಯಾಕ್ಸ್ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
ಮೊ : 78480 93666

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**URGENTLY REQUIRED FOR**
Tropical Agro System India Pvt Ltd.,
B.Com Graduates with Tally 2-3 Yrs experience Residing in Depo Association in Davangere.
93430 72909
93430 72902
email :m.babu@tropicalagro.com

**ಶಿಕ್ಷಕಿ ಬೇಕಾಗಿದ್ದಾರೆ**
ಶಾಲಾ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ಹೇಳಿಕೊಡಲು ಶಿಕ್ಷಕಿ ಬೇಕಾಗಿದ್ದಾರೆ.
ವೇತನ ರೂ. 5000
95910 00198

**WANTED**
Retail Experience Sales Staff Male / Female Branded Store.
Firstcry.com
C.G Hospital Road, Davanagere.
83108 00027

**ಸೈಟು ಮಾರಾಟಕ್ಕಿದೆ**
ಕರ್ನಾಟಕ ಹೌಸಿಂಗ್ ಬೋರ್ಡ್ ತುಂಗಭದ್ರಾ ಬಡಾವಣೆ 'ಡಿ' ಬ್ಲಾಕ್ ಪಾರ್ಕ್ ಹತ್ತಿರ (ಹೊಸ ಕೋರ್ಟ್ ಕಟ್ಟಡದ ಹತ್ತಿರ) 12mtrs x 18mtrs ಉತ್ತರಾಭಿಮುಖ ಇರುವ ಖಾಲಿ ನಿವೇಶನ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ : ಬ್ರೋಕರ್‌ಗಳಿಗೆ ಅವಕಾಶವಿಲ್ಲ
89710 60900

**WANTED LADY TEACHERS**
* B.Sc./B.Ed.-PCM/CBZ-04 Posts
* BA/B.Ed., - 04 Posts
* Computer Teachers -02
Note : we preference will be given to right & Experienced & Attractive Salary will be given to experienced candidates
95356 10817

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಪ್ರತಿಷ್ಠಿತ ಕಾಲೇಜಿಗೆ ಹೌಸ್ ಕೀಪಿಂಗ್‌ಗೆ ಹುಡುಗರು ಬೇಕಾಗಿದ್ದಾರೆ.
99806 47014

**ಮನೆ / ಮಳಿಗೆ ಮಾರಟಕ್ಕಿದೆ**
ಚಾಮರಾಜ ಪೇಟೆ, ಕೋದಂಡರಾಮ ದೇವಸ್ಥಾನದ ಹತ್ತಿರ, 20x23 ಅಳತೆಯ ಕಮರ್ಷಿಯಲ್‌ಗೆ ಅನುಕೂಲವಿರುವ ನೀರಿನ ಸೌಕರ್ಯವಿರುವ ಮನೆ / ಮಳಿಗೆ ಮಾರಾಟಕ್ಕಿದೆ.
99166 68637

**ಮನೆ ಬಾಡಿಗೆಗೆ ಇದೆ**
1 BHK, ಕೆ.ಬಿ. ಬಡಾವಣೆ, ಅಜ್ಜಂಪುರ ಲೇಔಟ್, ದಾವಣಗೆರೆ.
ಸಸ್ಯಹಾರಿಗಳಿಗೆ ಮಾತ್ರ.
ಸಂಪರ್ಕಿಸಿ :
98454 56639

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
B.Sc, B.Ed, D.Ed, BA, B.Ed
(ಹರಿಹರದಲ್ಲಿ ಇದ್ದವರಿಗೆ ಆದ್ಯತೆ)
99019 73064

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಪಿಯುಸಿ ಪಾಸ್/ಫೇಲ್ ಆದ 25 ವರ್ಷದೊಳಗಿನ ಯುವಕ/ಯುವತಿಯರು ದಾವಣಗೆರೆ ನ್ಯೂರೋಥೆರಪಿ ಕೇಂದ್ರದಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ.
99726 00713

**ಮಳಿಗೆ ಬಾಡಿಗೆಗೆ ಇವೆ**
ಕೆಟಿಜೆ ನಗರ, 3ನೇ ಮೇನ್, 8ನೇ ಕ್ರಾಸ್ ವಿದ್ಯಾರ್ಥಿ ಭವನದ ಹತ್ತಿರ, ಅಂಬಿಕಾ ಡಿಸ್ಟ್ರಿಬ್ಯೂಟರ್ಸ್ ಎದುರಿಗೆ 15x40 ಅಳತೆಯ ಗ್ರೌಂಡ್ ಫ್ಲೋರ್ ಮತ್ತು ಫಸ್ಟ್ ಫ್ಲೋರ್‌ನಲ್ಲಿ ಆಫೀಸ್‌ಗೆ, ಕ್ಲಿನಿಕ್‌ಗೆ, ಫಾರ್ಮಾಗೆ ನೀರಿನ ಸೌಕರ್ಯ ಇರುವ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಇವೆ.
98862 10458, 88678 45126

**WANTED**
Banking Sector Tele Caller
(Female only)
Qualification : Any Degree
85500 23110
Interview time : 11 am

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಹಿರಿಯ ನಾಗರಿಕರಿಗೆ ನಿವೃತ್ತ ನೌಕರಿದಾರರಿಗೆ ಹಾಗೂ ಗೃಹಿಣಿಯರಿಗೆ**
ವಯೋಮಿತಿ 30 ವರ್ಷ ಮೇಲ್ಪಟ್ಟು ಮನೆಯಿಂದ ಕೆಲಸ ಆಕರ್ಷಕ ವೇತನವಿರುತ್ತದೆ.
ಸಂಪರ್ಕಿಸಿ.
63606 95026
90352 60524

**COMMERCIAL SPACE FOR RENT**
1st floor, 2600sqft main Road Facing Suitable for Financial Institution, Bank, Strong room available Hadadi Main Road, Near Vidyarthi Bhavan Circle, DVG.
98440 15712
90604 04567

**WANTED**
Ladies / Gents
SSLC Passed / Failed
Must work in chocolate Shop
Salary Above Rs. 8000/-
Timings : 10.30 to 8.30
Contact : Cindrella Choclate
Near Vidyanagar 1st Bus stop opp. Bachpan School. Davanagere-5
99165 80080

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕೆಲಸ ಖಾಲಿ ಇದೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಸೇಲ್ಸ್ ಮತ್ತು ಮ್ಯಾನೇಜ್‌ಮೆಂಟ್ ಕೆಲಸ ಖಾಲಿ ಇದೆ.
ಕರೆ ಮಾಡಿ.
74066 59695

**ಅತೀ ಕಡಿಮೆ ಖರ್ಚಿನಲ್ಲಿ ವಿದೇಶಗಳಲ್ಲಿ MBBS**
98868 96574
86602 35013

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥ್ರೈಟಿಸ್) ಬೆಂಗಳೂರು ಇವರು
ಇಂದು ದಿ.4.7.2024ರ ಗುರುವಾರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

# ಗುಂಪುಗಾರಿಕೆ-ಪಕ್ಷ ವಿರೋಧಿ ಚಟುವಟಿಕೆ ವಿರುದ್ಧ ಉಚ್ಚಾಟನೆಗೆ ವಿಜಯೇಂದ್ರ ಮುಂದಾಗಲಿ

ಹೊನ್ನಾಳಿ, ಜು.3- ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ಎ.ಬಿ.ಹನುಮಂತಪ್ಪ ಬಣದಿಂದ ಲೋಕಸಭಾ ಚುನಾವಣಾ ಸೋಲಿನ ಆತ್ಮಾವಲೋಕನದ ಬಗ್ಗೆ ಸಭೆ ನಡೆಯಿತು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ಎ.ಬಿ.ಹನುಮಂತಪ್ಪ ಮಾತನಾಡಿ, ಬಿಜೆಪಿ ಕಾರ್ಯಕರ್ತರು ಪಕ್ಷದ ಪರವಾಗಿ ನಿಷ್ಠೆಯಿಂದ ಇದ್ದು, ಕೆಲ ಪ್ರಮುಖ ಮುಖಂಡರ ಗೊಂದಲದ ಹೇಳಿಕೆಗಳಿಂದಾಗಿ ದ್ವಂದ್ವ ಕುತಂತ್ರಗಳಿಂದಾಗಿ ಲೋಕಸಭಾ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಸೋಲು ಅನುಭವಿಸಬೇಕಾಯಿತು ಎಂದು ಪರೋಕ್ಷವಾಗಿ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಅವರ ಬೆಂಬಲಿಗರ ವಿರುದ್ಧ ವಾಗ್ದಾಳಿ ನಡೆಸಿದರು.

ಜಿಲ್ಲೆಯಲ್ಲಿ ಪಕ್ಷವು ಅಸ್ತಿತ್ವದಲ್ಲಿಲ್ಲದ ಕಾಲದಲ್ಲಿ ಜಿ.ಮಲ್ಲಿಕಾರ್ಜುನಪ್ಪ ಅವರು ತುಂಬಾ ಶ್ರಮವಹಿಸಿ ಪಕ್ಷವನ್ನು ಸಂಘಟಿಸಿ, ಸುದೀರ್ಘಾವಧಿಯವರೆಗೆ ಪಕ್ಷವು ಅಧಿಕಾರ ಹಿಡಿಯಲು ಕಾರಣರಾಗಿದ್ದರು. ಅಂತಹವರ ಕುಟುಂಬದವರು ಚುನಾವಣೆಯಲ್ಲಿ ಸ್ಪರ್ಧಿಸಿದರೆ, ಇವರು ಬೇರೆ ಜಿಲ್ಲೆಯವರು ದಾವಣಗೆರೆ ಜಿಲ್ಲೆಯವರಿಗೆ ಲೋಕಸಭಾ ಟಿಕೆಟ್ ನೀಡುವಂತೆ ಬಣ ರಾಜಕೀಯ ಮಾಡಿದ್ದಲ್ಲದೇ, ಜಿ.ಎಂ. ಸಿದ್ದೇಶ್ವರ ಅವರ ಬಗ್ಗೆ ಇಲ್ಲ-ಸಲ್ಲದ ಸುಳ್ಳು ಆರೋಪಗಳನ್ನು ಮಾಡಿದ್ದು, ಪಕ್ಷದ ಅಭ್ಯರ್ಥಿಯು ಹಿನ್ನಡೆ ಅನುಭವಿಸುವಂತಾಯಿತು ಎಂದು ಮಾರ್ಮಿಕವಾಗಿ ನುಡಿದರು.

ಶೀಘ್ರದಲ್ಲಿಯೇ ಜಿ.ಪಂ ಮತ್ತು ತಾ.ಪಂ ಚುನಾವಣೆಗಳು ಬರಲಿದ್ದು, ಈ ಚುನಾವಣೆಗಳಲ್ಲಿ ಪಕ್ಷವನ್ನು ಸಂಘಟಿಸಿ, ಯಾವುದೇ ಗೊಂದಲಗಳಿಗೆ ಆಸ್ಪದ ಕೊಡದಂತೆ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕಾಗಿದೆ ಎಂದು ಸಲಹೆ ನೀಡಿದರು.

ಬಿಜೆಪಿ ಮುಖಂಡ ಬೆನಕನಹಳ್ಳಿ ಎ.ಜಿ. ಮಹೇಂದ್ರಗೌಡ ಮಾತನಾಡಿ, ಇದುವರೆಗೂ ಬಿಜೆಪಿಯಿಂದ ಟಿಕೆಟ್ ಪಡೆದು ಅಧಿಕಾರವನ್ನು ಅನುಭವಿಸಿ ಪಕ್ಷವನ್ನು ಹೈಜಾಕ್ ಮಾಡಲು ಯತ್ನಿಸುತ್ತಿರುವ ರೇಣುಕಾಚಾರ್ಯ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲು ಕ್ರಮ ಜರುಗಿಸುವಂತೆ ಒತ್ತಾಯಿಸಿದರು.

ಪಕ್ಷದಿಂದ ಎಲ್ಲಾ ಸ್ಥಾನ-ಮಾನಗಳನ್ನು ಅನುಭವಿಸಿರುವ ರೇಣುಕಾಚಾರ್ಯ ಅವರು ತಾಲ್ಲೂಕಿನಲ್ಲಿ ಪಕ್ಷದಲ್ಲಿ ಒಡಕು ಮೂಡುವಂತೆ ಮಾಡಿದ್ದಲ್ಲದೇ ಜಿಲ್ಲಾದ್ಯಂತ ತಾವು ಹೇಳಿದ್ದೇ ನಡೆಯುತ್ತೆ ಎಂಬ ಸರ್ವಾಧಿಕಾರಿ ಧೋರಣೆ ತೋರುತ್ತಿದ್ದು, ಇದಕ್ಕೆ ಕಡಿವಾಣ ಹಾಕುವಂತೆ ವರಿಷ್ಠರನ್ನು ಆಗ್ರಹಿಸಿದರು.

**ಬರ ಅಧ್ಯಯನಕ್ಕೆ ಬಾರದವರು ಅಭಿನಂದನೆಗೆ:** ವಿಶ್ವೇಶ್ವರ ಹೆಗಡೆ ಕಾಗೇರಿ ನೇತೃತ್ವದ ತಂಡದವರು ಅವಳಿ ತಾಲ್ಲೂಕುಗಳಿಗೆ ಬರ ಅಧ್ಯಯನಕ್ಕೆಂದು



ಇಲ್ಲಿಗೆ ಬಂದಾಗ ಸಹಕರಿಸದೇ ಇದ್ದವರು ಇದೀಗ ಅದೇ ಕಾಗೇರಿಯವರಿಗೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಕ್ಕೆ ಮಾಜಿ ಶಾಸಕರು ಅಭಿನಂದನೆ ಸಲ್ಲಿಸಲು ಹೋಗಿದ್ದು ಎಷ್ಟರ ಮಟ್ಟಿಗೆ ಸರಿಯೆಂದು ವ್ಯಂಗ್ಯವಾಡಿದರು.

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸಾಮಾನ್ಯ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಗುಂಪುಗಾರಿಕೆ ಮತ್ತು ಪಕ್ಷ ವಿರೋಧಿ ಚಟುವಟಿಕೆಗಳನ್ನು ಮಾಡುತ್ತಿರುವವರ ಜೊತೆಗೆ ಸಲುಗೆ ಬೆಳೆಸುತ್ತಿರುವುದು ಮುಂದಿನ ಚುನಾವಣೆಗಳಲ್ಲಿ ಹಿನ್ನಡೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿ.ಪಂ ಮಾಜಿ ಸದಸ್ಯ ಎಂ.ಆರ್.ಮಹೇಶ್ ಮಾತನಾಡಿ, ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುವ ಶಕ್ತಿಯನ್ನು ತಾಲ್ಲೂಕು ಬಿಜೆಪಿ ಪಕ್ಷ ಕಳೆದುಕೊಂಡಿದ್ದು, ನಿದ್ರಾಹೀನ ಸ್ಥಿತಿಯಲ್ಲಿರುವ ಪಕ್ಷವನ್ನು ಎಚ್ಚರ ಮಾಡಿ ಕಾಂಗ್ರೆಸ್ ಪಕ್ಷದ ವಿರುದ್ಧ ಹೋರಾಟ ಮಾಡಲು ಸಜ್ಜಾಗಬೇಕೆಂದು ಅವರು ಕರೆ ನೀಡಿದರು.

ಬಿಜೆಪಿ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಾಂತರಾಜ್ ಪಾಟೀಲ್ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಹಿನ್ನಡೆಯಾಗಬಾರದು ಎಂಬ ಉದ್ದೇಶದಿಂದ ಮಾಜಿ ಶಾಸಕರು ಮತ್ತು ಅವರ ಬೆಂಬಲಿಗರು ಏನೇ ತೊಂದರೆ ಕೊಟ್ಟರೂ ಸಹ ಎಲ್ಲವನ್ನೂ ಸಹಿಸಿಕೊಂಡು ಚುನಾವಣೆ ಮಾಡಿದರೂ ನಿಷ್ಠೆಯಿಂದ ಚುನಾವಣೆ ಮಾಡದೇ ಕುತಂತ್ರದಿಂದ ಚುನಾವಣೆ ಮಾಡಿದ್ದು, ನೋವು ತಂದಿದೆ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡ ಕೆ.ವಿ.ಚನ್ನಪ್ಪ ಮಾತನಾಡಿ, ಪಕ್ಷದ ಕಾರ್ಯಕರ್ತರು ನಿಷ್ಠೆಯಿಂದ ಚುನಾವಣೆ ಎದುರಿಸಿದರೂ ಮಾಜಿ ಶಾಸಕರ ಬಣದಿಂದ ಹಳ್ಳಿಗಳಲ್ಲಿ ಪ್ರಚಾರಕ್ಕೆ ಹೋದ ಸಂದರ್ಭದಲ್ಲಿ ಮುಜುಗರ ಅನುಭವಿಸುವಂತಾಯ್ತು ಎಂದು ಬೇಸರ ವ್ಯಕ್ತಪಡಿಸಿದರು.

ಗಾಯತ್ರಿ ಸಿದ್ದೇಶ್ವರ ಅವರು ಚುನಾವಣೆ ಸಂದರ್ಭದಲ್ಲಿ ಹೊನ್ನಾಳಿಗೆ ಬಂದಾಗ ಎಂ.ಪಿ.ಆರ್. ಅವರು ತಮ್ಮ ಬಣದ ವ್ಯಕ್ತಿಯೊಬ್ಬನಿಂದ ಮುಜುಗರವುಂಟಾಗುವ ಪ್ರಶ್ನೆ ಮಾಡಿಸಿದ್ದು, ಎಂ.ಪಿ.ಆರ್. ಕಾಂಗ್ರೆಸ್ ಪಕ್ಷ ಸೇರುತ್ತಾರೆಂಬ ವದಂತಿಗಳ ಬಗ್ಗೆ, ಜಿ.ಎಂ.ಸಿದ್ದೇಶ್ವರ ಅವರ ಅಭಿಮಾನಿಗಳು ದಾವಣಗೆರೆಯಲ್ಲಿ ಸೋಲಿನ ಬಗ್ಗೆ ಆತ್ಮಾವಲೋಕನ ಸಭೆಯಲ್ಲಿನ ವಿಷಯಗಳನ್ನು ಸಭೆಯ ಗಮನಕ್ಕೆ ತಂದರಲ್ಲದೇ, ತಾಲ್ಲೂಕು ಬಿಜೆಪಿ ನೂತನ ಅಧ್ಯಕ್ಷರ ಆಯ್ಕೆಯ ಬಗ್ಗೆ ಪಕ್ಷದ ಕಾರ್ಯಕರ್ತರಿಂದ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ ಎಂದರು.

> ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿಯ ಸೋಲಿಗೆ ಕಾರಣರಾದವರು ಮೋದಿಗೆ ಜಯಕಾರ ಹಾಕಲು ದೆಹಲಿಗೆ ಹೋಗಿದ್ದು ಎಷ್ಟರ ಮಟ್ಟಕ್ಕೆ ಸರಿ ? ಇದೇ ರೀತಿ ಗುಂಪುಗಾರಿಕೆ ಮಾಡುವವರೊಂದಿಗೆ ರಾಜ್ಯಾಧ್ಯಕ್ಷರು ಕ್ರಮ ಕೈಗೊಳ್ಳದೇ - ಸಲುಗೆ ಬೆಳೆಸಿಕೊಂಡರೆ ಮುಂದಿನ ದಿನಗಳಲ್ಲಿ ಬರುವ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿಯೂ ಪಕ್ಷ ಹಿನ್ನಡೆ ಅನುಭವಿಸಲಿದೆ.
>
> **-ಬೆನಕನಹಳ್ಳಿ ಎ.ಜಿ.ಮಹೇಂದ್ರಗೌಡ,** ಬಿಜೆಪಿ ಮುಖಂಡ

ಈ ಸಂದರ್ಭದಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಕೆ.ರವಿ, ಉಪಾಧ್ಯಕ್ಷರುಗಳಾದ ಎಂ.ಯು.ನಟರಾಜ್, ಸಾಸ್ವೆಹಳ್ಳಿ ನರಸಿಂಹಪ್ಪ, ಮುಖಂಡರುಗಳಾದ ಯಕ್ಕನಹಳ್ಳಿ ಟಿ.ಎಸ್. ಜಗದೀಶ್, ನೆಲಹೊನ್ನೆ ದೇವರಾಜ್, ಕುಂದೂರು ನಾಗರಾಜ್, ಚೀಲೂರು ಲೋಕೇಶ್, ಅಜಯ್ ರೆಡ್ಡಿ, ಬಿಂಬ ಮಂಜುನಾಥ್, ಮಾಸಡಿ ಸಿದ್ದೇಶ್, ಚನ್ನೇಶ್ ಸೇರಿದಂತೆ ಅವಳಿ ತಾಲ್ಲೂಕುಗಳ ಮುಖಂಡರುಗಳು, ಕಾರ್ಯಕರ್ತರುಗಳು ಉಪಸ್ಥಿತರಿದ್ದರು.

## ಮುಡಾ ನಿವೇಶನಗಳ ಹಂಚಿಕೆ ಅಮಾನತ್ತು

ಬೆಂಗಳೂರು, ಜು. 3 - ಮೈಸೂರಿನ ಮುಡಾ ನಿವೇಶನ ಹಂಚಿಕೆಯಲ್ಲಿ ದುರುಪಯೋಗ ಪತ್ತೆಗೆ ಕ್ರಮ ಕೈಗೊಳ್ಳಲಾಗಿದ್ದು, ಎಲ್ಲಾ ನಿವೇಶನಗಳ ಹಂಚಿಕೆ ಅಮಾನತ್ತಿನಲ್ಲಿಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿವೇಶನಗಳ ಹಂಚಿಕೆ ಮಾಡಿದವರನ್ನು ವರ್ಗಾವಣೆ ಮಾಡಿ ಹಿರಿಯ ಐಎಎಸ್ ಅಧಿಕಾರಿಗಳಿಂದ ತನಿಖೆ ನಡೆಸಲಾಗುತ್ತಿದೆ, ವರದಿ ಬಂದ ನಂತರ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಎಲ್ಲವನ್ನೂ ಸಿಬಿಐ ತನಿಖೆಗೆ ಹಸ್ತಾಂತರಿಸಲು ಬಿಜೆಪಿಯವರು ಹೇಳುತ್ತಾರೆ, ಅಧಿಕಾರದಲ್ಲಿದ್ದಾಗ ಅವರು ಯಾವ ಪ್ರಕರಣ ವನ್ನು ಸಿಬಿಐಗೆ ಹಸ್ತಾಂತರ ಮಾಡಿದ್ದರು? ಎಂದು ಪ್ರಶ್ನಿಸಿದರು.

ಜಮೀನು ಕೊಟ್ಟವರಿಗೆ ಪರ್ಯಾಯವಾಗಿ ನಿವೇಶನ ನೀಡಬೇಕೆಂದು ಬಿಜೆಪಿಯೇ ಕಾನೂನು ಮಾಡಿದೆ, ಪ್ರಕರಣದಲ್ಲಿ ನನ್ನ ಪಾತ್ರವೇನಿದೆ? ಪ್ರತಿಪಕ್ಷ ನಾಯಕ ಆರ್.ಅಶೋಕ್ ಕರ್ತವ್ಯ ಲೋಪ ಎಸಗಿದ್ದಾರೆ ಎಂದರೆ ರಾಜಿನಾಮೆ ಕೊಡುತ್ತಾರೆಯೇ? ಎಂದೂ ಪ್ರಶ್ನಿಸಿದರು.

ಅವರ ಕಾಲದಲ್ಲಿ ಅಕ್ರಮ-ಸಕ್ರಮ ಸರಿಯಾಗಿ ಆಗಿಲ್ಲ ಎಂಬ ಆರೋಪ ಕೇಳಿ ಬಂದಾಗ ನ್ಯಾಯಾಲಯದಿಂದ ಜಾಮೀನು ಪಡೆದಿದ್ದರು. ಅದಕ್ಕೆ ರಾಜಿನಾಮೆ ಕೊಡಿ ಅಂದರೆ ಕೊಡುತ್ತಾರೆಯೇ? ಎಂದರು.

ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯನ್ನು ಎಸ್ಐಟಿಗೆ ವಹಿಸಲಾಗಿದೆ. ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ಬರೆದ ಡೆತ್‌ನೋಟ್‌ನಲ್ಲಿ, ಮಂತ್ರಿಗಳು ವ್ಯವಸ್ಥಾಪಕ ನಿರ್ದೇಶಕರಿಗೆ ಮೌಖಿಕ ಆದೇಶ ನೀಡಿದ್ದರು ಎಂದು ನಮೂದಿಸಿದ ಹಿನ್ನೆಲೆಯಲ್ಲಿ ಸಚಿವ ನಾಗೇಂದ್ರ ಅವರ ರಾಜೀನಾಮೆ ಪಡೆದೆವು. ಪ್ರಕರಣದ ಬ್ಯಾಂಕ್ ವ್ಯವಹಾರಗಳ ಬಗ್ಗೆ ಸಿಬಿಐ ತನಿಖೆ ನಡೆಸುತ್ತಿದೆ ಎಂದವರು ಹೇಳಿದರು.

ಸಚಿವ ಶರಣ ಪ್ರಕಾಶ್ ಪಾಟೀಲ್ ಅವರಿಗೂ ಪಾಲು ಹೋಗಿದೆ ಎಂಬ ಆರೋಪದ ತನಿಖೆಗಾಗಿಯೇ ಎಸ್ಐಟಿ ರಚನೆಯಾಗಿದೆ. ವರದಿ ಬಂದ ನಂತರ ದೋಷಾರೋಪ ಪಟ್ಟಿ ಸಲ್ಲಿಕೆಯಾಗಬೇಕು. ಇದ್ಯಾವುದೂ ಇಲ್ಲದೇ ಕ್ರಮ ಕೈಗೊಳ್ಳುವುದು ಹೇಗೆ? ಎಂದು ಪ್ರಶ್ನಿಸಿದರು.



## ಹೊಳೆಸಿರಿಗೆರೆ : ಮಲೇರಿಯಾ ವಿರೋಧಿ ಮಾಸಾಚರಣೆ

ಮಲೇಬೆನ್ನೂರು, ಜು.3- ಹೊಳೆಸಿರಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಶ್ರೀ ಮಾಗೋಡ ಹಾಲಪ್ಪ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಮಲೇರಿಯಾ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ವೈದ್ಯಾಧಿಕಾರಿ ಡಾ.ಚೇತನ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಲೇರಿಯಾ ಹೇಗೆ ಹರಡುತ್ತದೆ ? ಮತ್ತು ಅದನ್ನು ಹೇಗೆ ತಡೆಗಟ್ಟಬೇಕು ? ಹಾಗೂ ರೋಗ ಬಂದರೆ ಚಿಕಿತ್ಸೆ ಕುರಿತು ಸುದೀರ್ಘವಾಗಿ ಮಾಹಿತಿ ನೀಡಿದರು.

ಶಾಲಾ ಮುಖ್ಯೋಪಾಧ್ಯಾಯ ಕರಿಬಸಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಶಂಕರ್, ಪ್ರಕಾಶ್, ಆರೋಗ್ಯ ನಿರೀಕ್ಷಣಾಧಿಕಾರಿ ಪ್ರಕಾಶ್ ನಾಯಕ್, ತಿಪ್ಪೇಸ್ವಾಮಿ, ಆರೋಗ್ಯ ಸುರಕ್ಷಣಾಧಿಕಾರಿ ಆಶಾರಾಣಿ, ಆಶಾ ಕಾರ್ಯಕರ್ತೆಯರಾದ ಮಾಲಾಶ್ರೀ, ಪುಷ್ಪಾವತಿ ಭಾಗವಹಿಸಿದ್ದರು.

## ಕೇಳುಗರ ಮನಗೆದ್ದ 'ಸಿನಿ ಹನಿ' ಗಾನ



ದಾವಣಗೆರೆ, ಜು. 3- ನಗರದ ಕುವೆಂಪು ಕನ್ನಡ ಭವನದಲ್ಲಿ ಸ್ವರತಂತ್ರ ಗಾಯಕರ ತಂಡದ ವತಿಯಿಂದ 'ನೂರೊಂದು ನೆನಪು ಹಾಡಾಗಿ ಬಂತು.......' ಶೀರ್ಷಿಕೆಯಡಿ ಏರ್ಪಡಿಸಿದ್ದ 'ಸಿನಿಹನಿ' ಕಾರ್ಯಕ್ರಮ ಕೇಳುಗರ ಮನಗೆದ್ದಿತು.

ಸ್ವರತಂತ್ರ ಗಾಯಕರ ತಂಡ ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಅಭಿನಯದ ಗೀತೆಗಳ ಗಾಯನ ಪ್ರಸ್ತುತಿ ಪಡಿಸಿದ್ದು ವಿಶೇಷವಾಗಿತ್ತು. ಉದಯೋನ್ಮುಖ ಗಾಯಕರು ಸುಮಧುರ ಗೀತೆಗಳ ಮೂಲಕ ಪ್ರೇಕ್ಷಕರ ಮನ ರಂಜಿಸಿದರು.

ಸಂಧ್ಯಾ ಗಿರೀಶ್, ವಿದ್ಯಾ ವಿಕ್ರಂ, ಡಾ. ರಶ್ಮಿ ಸಂಜಯ್, ಲಲಿತ ಕಿರಣ್, ಅರ್ಚನಾ ರಾಜೀವ್, ದೀಪಶ್ರೀ ದಿವಾಕರ್, ಡಾ. ದೀಪಕ್ ರೋಹಿಡೇಕರ್, ಕೆ.ಎಸ್. ದೀಪಕ್, ರಘು ನಂದನ್, ಲೋಹಿತ್ ಚಿನಗುಡಿ ಇವರ ಸಿರಿಕಂಠದಿಂದ ಮೂಡಿಬಂದ ಗೀತೆಗಳಿಗೆ ಸಿನಿಪ್ರಿಯರು ತಲೆದೂಗಿದರು.

ಆರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ. ಚಂದ್ರಪ್ಪ, ಶ್ರೀಮತಿ ಜಯಂತಿ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.

ಇದೇ ವೇಳೆ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸ್ವರತಂತ್ರ ತಂಡದ ಮುಖ್ಯಸ್ಥರಾದ ಡಾ. ದೀಪಕ್ ಅವರನ್ನು ಗೌರವಿಸಲಾಯಿತು.

## ಹರಿಹರ ಜಿಟಿಟಿಸಿ ಕಾಲೇಜಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಹರಿಹರ, ಜು. 3 - ಡಿಪ್ಲೋಮಾ ಕೋರ್ಸ್‌ಗಳಾದ ಡಿಪ್ಲೋಮಾ ಇನ್ ಟೂಲ್ ಮತ್ತು ಡೈ ಮೇಕಿಂಗ್, ಡಿಪ್ಲೋಮಾ ಇನ್ ಆಟೋಮೇಷನ್ ಮತ್ತು ರೊಬೊಟಿಕ್ಸ್, ಡಿಪ್ಲೋಮಾ ಇನ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಮತ್ತು ಡಿಪ್ಲೋಮಾ ಇನ್ ಪ್ರಿಸಿಷನ್ ಮ್ಯಾನ್ಯುಫ್ಯಾಕ್ಚರಿಂಗ್ ಡಿಪ್ಲೋಮಾ ಕೋರ್ಸುಗಳಿಗೆ ಎಸ್.ಎಸ್.ಎಲ್.ಸಿ ಪಾಸಾದ ಅರ್ಹ ವಿದ್ಯಾರ್ಥಿಗಳು ಜಿಟಿಟಿಸಿ ಹರಿಹರ ಕೇಂದ್ರಕ್ಕೆ ನೇರವಾಗಿ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಪ್ಲಾಟ್ ನಂ.: 22 ಸಿ ಮತ್ತು ಡಿ, ಕೆ.ಐ.ಎ.ಡಿ.ಬಿ ಮತ್ತು ಇಂಡಸ್ಟ್ರಿಯಲ್ ಏರಿಯಾ ಹರ್ಲಾಪುರ, ಕೆ.ಎಸ್.ಆರ್.ಟಿ.ಸಿ ಡಿಪೋ ಹತ್ತಿರ, ಹರಿಹರ ಅಥವಾ ದೂ.ಸಂಖ್ಯೆ 9845941245, 8884488202 ಗೆ ಸಂಪರ್ಕಿಸಬಹುದು.

## ಬಿಹಾರದಲ್ಲಿ ಒಂದೇ ದಿನ 3 ಸೇತುವೆಗಳ ಕುಸಿತ

ಪಾಟ್ನಾ, ಜು. 3 - ಬಿಹಾರದಲ್ಲಿ ಸೇತುವೆಗಳ ಕುಸಿತ ಮುಂದುವರೆದಿದ್ದು ಬುಧವಾರದಂದು ಮೂರು ಸೇತುವೆಗಳು ಕುಸಿದಿವೆ. ಕಳೆದ 15 ದಿನಗಳಲ್ಲಿ 9 ಸೇತುವೆಗಳು ಕುಸಿದಿವೆ.

ಬುಧವಾರ ಕುಸಿದ ಸೇತುವೆಗಳು 30 ರಿಂದ 80 ವರ್ಷ ಹಳೆಯವು. ಈ ಘಟನೆಗಳಿಂದ ಯಾವುದೇ ಹಾನಿ ಸಂಭವಿಸಿಲ್ಲ. ಸೇತುವೆಗಳ ಕುಸಿತದ ತನಿಖೆಗಾಗಿ ರಾಜ್ಯ ಸರ್ಕಾರ ಈಗಾಗಲೇ ಸಮಿತಿಯೊಂದನ್ನು ರಚಿಸಿದೆ. ಸಿವನ್ ಹಾಗೂ ಸರನ್ ಜಿಲ್ಲೆಗಳಲ್ಲಿ ಬುಧವಾರ ಸೇತುವೆಗಳು ಕುಸಿದಿವೆ. ಇವು ಹಳೆಯ ಸೇತುವೆಗಳಾಗಿದ್ದವು ಎಂದು ಅಧಿಕಾರಿಗಳು ಹೇಳಿದ್ದಾರೆ.

## ಕಕ್ಕರಗೊಳ್ಳದಲ್ಲಿ ಇಂದು ಎನ್ನೆಸ್ಸೆಸ್ ಶಿಬಿರ

ದಾವಣಗೆರೆಯ ಚಾಣಕ್ಯ ಪ್ರಥಮ ದರ್ಜೆ ವಾಣಿಜ್ಯ ಮಹಾವಿದ್ಯಾಲಯದ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಂದ ಕಕ್ಕರಗೊಳ್ಳ ಗ್ರಾಮದ ಸಮುದಾಯ ಭವನದಲ್ಲಿ ಎನ್‌ಎಸ್‌ಎಸ್ ಶಿಬಿರದ ಕಾರ್ಯಕ್ರಮಗಳು ನಡೆಯಲಿವೆ.

ಇಂದು ಗ್ರಾಮದ ಮುಖಂಡ ಕೆ. ಬಸವಂತಪ್ಪ ಧ್ವಜಾರೋಹಣ ನೆರವೇರಿಸುವರು. ಬೆಳಗ್ಗೆ 10ಕ್ಕೆ ಸಿಟಿ ಸೆಂಟ್ರಲ್ ಹಾಸ್ಪಿಟಲ್‌ನ ಡಾ. ಆದರ್ಶ ಹೆಗಡೆ ಅವರಿಂದ 'ಮೂಲಭೂತ ಜೀವ ರಕ್ಷಣಾ ತಂತ್ರಗಳು' ಕುರಿತಂತೆ ಪ್ರಥಮ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡುವರು.

ಸಂಜೆ 5ಕ್ಕೆ ಹಿರಿಯ ಮನೋಚಿಕಿತ್ಸಕ ಡಾ. ನಾಗರಾಜ್ ರಾವ್ ಹಾಗೂ ಪ್ರಾಧ್ಯಾಪಕ ಡಾ. ಎಸ್. ವೆಂಕಟೇಶ್ ಬಾಬು ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಬೆಂಗಳೂರು ವಿವಿಯ ವಿಶ್ರಾಂತ ಕುಲಪತಿ ಡಾ.ಕೆ. ಸಿದ್ದಪ್ಪ ಮತ್ತು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ರಾಣೇಬೆನ್ನೂರಿಗೆ ಇಂದು ರಥಯಾತ್ರೆ

ಜಿಲ್ಲೆಯಾದ್ಯಂತ ಸಂಚರಿಸುತ್ತಿರುವ ಕರ್ನಾಟಕ-50 ಸಂಭ್ರಮದ ಕರ್ನಾಟಕ ಜ್ಯೋತಿ ರಥಯಾತ್ರೆಯು ರಾಣೇಬೆನ್ನೂರಿಗೆ ಇಂದು ಬರಲಿದ್ದು ತಹಶೀಲ್ದಾರ್‌ರವರ ಕಛೇರಿಯಿಂದ ಬೆಳಿಗ್ಗೆ 10 ಗಂಟೆಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

## ಅಟಲ್ ಬಿಹಾರಿ ವಾಜಪೇಯಿ ಅಭಿಮಾನಿ ಬಳಗದಿಂದ ಶಸ್ತ್ರಚಿಕಿತ್ಸೆಗೆ ಧನಸಹಾಯ



ದಾವಣಗೆರೆ, ಜು. 3 - ಜಿಲ್ಲಾ ಅಟಲ್ ಬಿಹಾರಿ ವಾಜಪೇಯಿ ಅಭಿಮಾನಿ ಬಳಗದ ವತಿಯಿಂದ ಅನಾರೋಗ್ಯದಿಂದ ಬಳುತ್ತಿರುವ ಶ್ರೀಮತಿ ಅಕ್ಷತಾ ಮತ್ತು ಮಲ್ಲೇಶ್ ಕಡೇಮನಿ ಅವರುಗಳಿಗೆ ಶಸ್ತ್ರಚಿಕಿತ್ಸೆಗೆ ಧನಸಹಾಯ ಮಾಡಲಾಯಿತು.ಬಳಗದ ಗೌರವಾಧ್ಯಕ್ಷ ಹಾಗೂ ರೈತ ನಾಯಕ ಆವರಗೊಳ್ಳದ ಬಿ.ಎಂ. ಷಣ್ಮುಖಯ್ಯ, ಜಿಲ್ಲಾಧ್ಯಕ್ಷ ಎಂ.ಪಿ. ಕೃಷ್ಣಮೂರ್ತಿ ಪವಾರ್, ಕಾರ್ಯದರ್ಶಿ ಗೌಳಿ ಲಿಂಗರಾಜ್, ಬಿಜೆಪಿ ಕಾರ್ಯಕರ್ತೆ ಶ್ರೀಮತಿ ಎ.ಬಿ.ಮಂಜುಳಾ ಮತ್ತಿತರರು ಸಹಾಯ ಮಾಡಿದರು.

### ಓದುಗರ ಪತ್ರ

## ಮಹಾನಗರ ಪಾಲಿಕೆಯವರೇ ಇತ್ತ ಗಮನ ಹರಿಸಿ

### ತುಸು ಮಳೆಯಾದರೂ ರಸ್ತೆಯಲ್ಲಿ ನಿಲ್ಲುವ ನೀರು, ಕಣ್ಮುಚ್ಚಿ ಕುಳಿತ ಪಾಲಿಕೆ



**ಮಾನ್ಯರೇ**

ದಾವಣಗೆರೆಯ ವಿದ್ಯಾರ್ಥಿ ಭವನ ವೃತ್ತದಿಂದ ಅಂಬೇಡ್ಕರ್ ವೃತ್ತಕ್ಕೆ ಹೋಗುವ ರಸ್ತೆ ಇದು. ಇಲ್ಲಿ ತುಸು ಮಳೆಯಾದರೂ ರಸ್ತೆಯಲ್ಲಿ ಬಹಳಷ್ಟು ನೀರು ನಿಲ್ಲುತ್ತದೆ. ರಸ್ತೆ ಮೇಲೆ ಬಿದ್ದ ನೀರು ಹರಿದು ಹೋಗಲು ಸಮರ್ಪಕ ವ್ಯವಸ್ಥೆ ಇಲ್ಲದ ಕಾರಣ ನೀರು ನಿಲ್ಲುವುದರಿಂದ ವಾಹನ ಸವಾರರು ಬಲಬದಿಯಲ್ಲಿಯೇ ಬರುವುದರಿಂದ ಇದಿರು ಬರುವ ವಾಹನಗಳಿಗೆ ಅಡ್ಡಿಯಾಗುತ್ತಿದೆ. ಅಲ್ಲದೇ ಪಾದಚಾರಿಗಳಿಗೂ ತೊಂದರೆಯಾಗುತ್ತಿದೆ. ಕಣ್ಣು ಮುಚ್ಚಿ ಕುಳಿತ ಮಹಾನಗರ ಪಾಲಿಕೆ ಅಧಿಕಾರಿಗಳು ಇತ್ತ ಗಮನ ಹರಿಸಬೇಕಿದೆ.

## ಬಾತಿ ಕೆರೆಗೆ ತಡೆ ಗೋಡೆ, ವಿದ್ಯುತ್ ದೀಪ ನಿರ್ಮಿಸಿ..!

**ಮಾನ್ಯರೇ,**

ದಾವಣಗೆರೆ ಹಾಗೂ ಹರಿಹರದ ಮಾರ್ಗ ಮಧ್ಯೆ ಇರುವ ದೊಡ್ಡಬಾತಿ ಸಮೀಪದ ಕೆರೆಗೆ ತಡೆ ಗೋಡೆ ಇಲ್ಲದಿರುವುದು ಸಂಚಾರಿಗಳಿಗೆ ಸಂಕಟ ತಂದಿದೆ.

ಕೆರೆಯ ದಂಡೆಗೆ ಅಂಟಿಕೊಂಡ ದಾವಣಗೆರೆ ಮತ್ತು ಹರಿಹರ ಸಂಪರ್ಕಿಸುವ ರಸ್ತೆ 1 ಕಿ.ಮೀ ವ್ಯಾಪ್ತಿ ಹೊಂದಿದ್ದು, ಇಲ್ಲಿ ನಿತ್ಯವೂ ಸಾವಿರಾರು ಜನ ಪ್ರಯಾಣಿಸುತ್ತಾರೆ. ಈ ವೇಳೆ ಅಪಾಯ ಸಂಭವಿಸಿದರೆ ಪ್ರಾಣ ಹಾನಿಯಾಗುವ ಸಾಧ್ಯತೆ ಕಾಣುತ್ತಿದೆ.

ಹಾಗೆಯೇ ರಾತ್ರಿ ಸಮಯದಲ್ಲಿ ಕೆರೆಯ ಮೇಲಿರುವ ರಸ್ತೆಯಲ್ಲಿ ಬೀದಿ ದೀಪದ ವ್ಯವಸ್ಥೆ ಇಲ್ಲದಿರುವುದರಿಂದ ರಸ್ತೆಯುದ್ದವೂ ಸಂಪೂರ್ಣ ಕತ್ತಲು ಆವರಿಸುತ್ತಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ಸಮಸ್ಯೆಗೆ ಸ್ಪಂದಿಸುವಂತೆ ಮನವಿ ಮಾಡುತ್ತಿದ್ದೇನೆ.

**- ಎಸ್.ಎಚ್. ಷಣ್ಮುಖ, ಹಳೇಬಾತಿ.**

## ಸಿಲಿಂಡರ್ ಸ್ಫೋಟ : ಮೇಯರ್ ಭೇಟಿ



ದಾವಣಗೆರೆ, ಜು. 3 - ಸ್ಥಳೀಯ ರಾಮನಗರದ ಎಸ್‌ಒಜಿ ಕಾಲೋನಿ ಮನೆಯಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟ ಸಂಭವಿಸಿದ ಮನೆಗೆ ಮಹಾನಗರ ಪಾಲಿಕೆಯ ಮೇಯರ್ ವಿನಾಯಕ ಪೈಲ್ವಾನ್, ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಪಾಮೇನಹಳ್ಳಿ ನಾಗರಾಜ್ ಭೇಟಿ ನೀಡಿದ್ದರು.

ಘಟನೆ ಕುರಿತಂತೆ ಸ್ಥಳೀಯರಿಂದ ಮಾಹಿತಿ ಪಡೆದರು. ಐವರು ಗಂಭೀರವಾಗಿ ಗಾಯಗೊಂಡು ಎಸ್.ಎಸ್.ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಗಾಯಾಳುಗಳನ್ನು ಭೇಟಿ ಮಾಡಿ ಧೈರ್ಯ ತುಂಬಿದರು.

ಎಸ್.ಎಸ್.ಹೈಟೆಕ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗಾಕ್ಷೇಮ ವಿಚಾರಿಸಿದ ವಿನಾಯಕ ಪೈಲ್ವಾನ್, ಗಡಿಗುಡಾಳ್ ಮಂಜುನಾಥ್, ಪಾಮೇನಹಳ್ಳಿ ನಾಗರಾಜ್ ಅವರು, ಐವರು ಗಾಯಾಳುಗಳಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು.

ಎಲ್ಲಾ ಗಾಯಾಳುಗಳಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಎಲ್ಲಾ ಚಿಕಿತ್ಸೆ ನೀಡಲು ಜಿಲ್ಲಾಧಿಕಾರಿ ಅವರು ಈಗಾಗಲೇ ಸೂಚನೆ ನೀಡಿದ್ದಾರೆ. ಯಾರೂ ಆತಂಕಕ್ಕೆ ಒಳಗಾಗಬೇಡಿ ಎಂದು ಹೇಳಿದರು.

## ಸರ್ಕಾರದ ಶಿಕ್ಷಣ ವ್ಯಾಪಾರೀಕರಣ ಧೋರಣೆ : ಎಐಡಿಎಸ್‌ಓ ಖಂಡನೆ

ದಾವಣಗೆರೆ, ಜು. 3-ರಾಜ್ಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್ ಆರ್ ಐ ಕೋಟಾದ ಪ್ರಸ್ತಾವನೆಯನ್ನು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಖಂಡಿಸಿದ್ದಾರೆ.

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್ ಐ ಕೋಟಾಗೆ ಅನುಮತಿ ನೀಡುವಂತೆ ಕರ್ನಾಟಕ ಸರ್ಕಾರವು ಎನ್ ಎಂ ಸಿ ಗೆ ಮನವಿ ಸಲ್ಲಿಸಿದೆ.

ಪ್ರಸ್ತುತ ಲಭ್ಯವಿರುವ ಸೀಟುಗಳಲ್ಲೇ ಎನ್‌ಆರ್‌ಐ ಕೋಟಾ ತೆರೆಯದೇ, ಶೇ. 15 ರಷ್ಟು ಹೆಚ್ಚುವರಿ ಸೀಟುಗಳಿಗೆ ಕರ್ನಾಟಕ ಸರ್ಕಾರವು ವಿನಂತಿಸಿದೆ. ಒಂದು ವೇಳೆ, ಎನ್‌ಆರ್‌ಐ ಕೋಟಾ ಜಾರಿಯಾದಲ್ಲಿ, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸಂಪೂರ್ಣ ವ್ಯಾಪಾರೀಕರಣಕ್ಕೆ ಪರವಾನಿಗೆ ನೀಡಿದಂತಾಗುತ್ತದೆ.

ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಉದ್ದೇಶಕ್ಕೆ ಇದರಿಂದ ಹೊಡೆತ ಉಂಟಾಗುತ್ತದೆ. ಸರ್ಕಾರವು ಸೀಟುಗಳನ್ನು ಹೆಚ್ಚಿಸುವುದಾದರೆ, ರಾಜ್ಯದ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚಿಸಲಿ. ಅದನ್ನು ಬಿಟ್ಟು ಎನ್ ಆರ್ ಐ ಕೋಟಾ ಹೆಸರಿನಲ್ಲಿ ವೈದ್ಯಕೀಯ ಸೀಟುಗಳ ಮಾರಾಟ ನಡೆಸಬಾರದು ಎಂದು ಆಗ್ರಹಿಸಿದ್ದಾರೆ. ಸರ್ಕಾರವು ತನ್ನ ಈ ನಡೆಯನ್ನು ಹಿಂಪಡೆದು ವೈದ್ಯಕೀಯ ಸೀಟುಗಳನ್ನು ಹೆಚ್ಚಿಸಬೇಕು. ವೈದ್ಯಕೀಯ ಶಿಕ್ಷಣದಿಂದ ದೂರ ತಳಲ್ಪಡುತ್ತಿರುವ ರಾಜ್ಯದ ಬಡ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಅದನ್ನು ತಲುಪಿಸುವಂತೆ ಮನವಿ ಮಾಡಿದ್ದಾರೆ.

## ಶಂಕರ್ ಕಾಟ್ವೆ, ವೆಂಕಟೇಶ್‌ಗೆ ಛಾಯಾರತ್ನ ಪ್ರಶಸ್ತಿ : ನಾಳೆ ಪ್ರದಾನ

ದಾವಣಗೆರೆ, ಜು.3- ಕರ್ನಾಟಕ ವಿಡಿಯೋ ಮತ್ತು ಫೋಟೋ ಅಸೋಸಿಯೇಷನ್ ಮತ್ತು ಬಸೆಲ್ ಇಂಟ್ರ್ಯಾಕ್ಷನ್ ಪ್ರೈ. ಲಿ. ಸಹಯೋಗದೊಂದಿಗೆ ಬೆಂಗಳೂರಿನ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ನಾಡಿದ್ದು ದಿನಾಂಕ 5ರಿಂದ 7ವರೆಗೆ ಫೋಟೋ ಟುಡೇ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಸಮಾರಂಭ ನಡೆಯಲಿದೆ ಎಂದು ಛಾಯಾ ಸುದ್ದಿ ಖಾಜಾಪೀರ್ ತಿಳಿಸಿದರು.

ಅವರು ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜು. 5ರಂದು ನಡೆಯುವ ಪ್ರಥಮ ದಿನದ ಸಮಾರಂಭವನ್ನು ಸಂಸದ ತೇಜಸ್ವಿಸೂರ್ಯ ಉದ್ಘಾಟಿಸುವರು. ಸಮಾರಂಭದಲ್ಲಿ ದಾವಣಗೆರೆಯ ಶಂಕರ ಸ್ಟುಡಿಯೋ ಮಾಲೀಕ ಶಂಕರ್ ಕಾಟ್ವೆ ಹಾಗೂ ಹರಿಹರದ ಎಸ್.ಎಲ್.ವಿ. ಡಿಜಿಟಲ್ ಸ್ಟುಡಿಯೋ ಮಾಲೀಕ ವೆಂಕಟೇಶ್ ಕೆ.ಎಂ. ಅವರಿಗೆ ಕರ್ನಾಟಕ ಛಾಯಾರತ್ನ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದರು.

ವಿಡಿಯೋ ಮತ್ತು ಫೋಟೋ ಅಸೋಸಿಯೇಷನ್ ತಾಲ್ಲೂಕು ಅಧ್ಯಕ್ಷ ಎಂ. ಮನು, ಗ್ರಾಮಾಂತರ ವಲಯಾಧ್ಯಕ್ಷ ಕೊಂಡಜ್ಜಿ ರಾಜಶೇಖರ್, ಪ್ರಶಸ್ತಿ ಪುರಸ್ಕೃತರಾದ ಶಂಕರ್ ಕಾಟ್ವೆ ಹಾಗೂ ವೆಂಕಟೇಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಸಾರ್ವಜನಿಕ ಪ್ರಕಟಣೆ

ಈ ಕೆಳಗೆ ಸಹಿ ಮಾಡಿದ ನಾನು ಶ್ರೀ ಎನ್.ಡಿ. ಕೃಷ್ಣಮೂರ್ತಿ ಬಿನ್ ನವಲೆ ದೇವೇಂದ್ರಪ್ಪ, ಆದ ನಾನು ಈ ಕೆಳಕಂಡ ಷೆಡ್ಯೂಲ್ ನಲ್ಲಿ ವಿವರಿಸಿರುವ ಖಾಲಿ ನಿವೇಶನವನ್ನು ಅದರ ಹಕ್ಕುದಾರಿ ಸ್ವಾಧೀನಾನುಭವಿಗಳು ಮತ್ತು ಖಾತಾಧಾರಿ ಮಾಲೀಕರಾದ ಶ್ರೀ ಪ್ರವೀಣ ಕುಮಾರ್ ಕಂಪ್ಲಿ ಬೆಲ್ಲದ ವಾಸ: ಡೋರ್ ನಂ. 197, 16ನೇ ಕ್ರಾಸ್, ಜೆ.ಎನ್.ಆರ್.ಸಿ, ಹಿಂಭಾಗ, ಟೆಲಿಕಾಂ ಲೇಔಟ್, ಶ್ರೀರಾಂಪುರ, ಬೆಂಗಳೂರು ಉತ್ತರ, ಬೆಂಗಳೂರು-560064. ವಾಸಿಯಾದ ಇವರಿಂದ ಖರೀದಿಸುತ್ತಿದ್ದು, ಷೆಡ್ಯೂಲ್ ಸೊತ್ತಿನ ಮೇಲೆ ಯಾರಾದರೂ ಯಾವುದೇ ತರಹದ ಕಾನೂನು ರೀತ್ಯ ಹಕ್ಕು ವಗೈರೆ ಇದ್ದಲ್ಲಿ, ಅಂತಹವರು ಈ ತಾರೀಖಿನಿಂದ 8 ದಿನಗಳ ಒಳಗಾಗಿ ಕೆಳಕಂಡ ವಿಳಾಸಕ್ಕೆ ಕಾನೂನು ರೀತ್ಯಾ ತಮ್ಮ ಹಕ್ಕು ಸ್ಥಾಪಿಸುವಂತಹ ಸೂಕ್ತ ದಾಖಲೆಗಳೊಂದಿಗೆ ಯಾರದ್ದೂ ಎಂದಿಗೂ ಯಾವುದೇ ತರಹದ ಹಕ್ಕು ವಗೈರೆ ಇಲ್ಲವೆಂದು ಪರಿಗಣಿಸಿ, ನಾನು ಷೆಡ್ಯೂಲ್ ಸೊತ್ತಿನ ಹಕ್ಕಿನ ಬಗ್ಗೆ ಯಾವುದೇ ತಂಟೆ-ತಕರಾರು ಮಾಡಲು ಯಾವುದೇ ತರಹದ ಹಕ್ಕು ಸ್ಥಾಪಿಸಲು ಯಾವುದೇ ವ್ಯಕ್ತಿಯೂ ಯಾವುದೇ ತರಹದ ಹಕ್ಕನ್ನು ಪಡೆಯಲಾರರು ಮತ್ತು ತಮ್ಮ ಹಕ್ಕು ಕಳೆದುಕೊಂಡಿರುತ್ತಾರೆಂದೂ ಮತ್ತು ಸದರಿ ಕಾನೂನು ರೀತ್ಯಾ ಯಾವುದೇ ರೀತಿಯಲ್ಲಿ ಜವಾಬ್ದಾರ ರನ್ನಾಗಿ ಹೊಣೆಗಾರರನ್ನಾಗಲೀ ಮಾಡಲು ಸಾಧ್ಯವಿರುವುದಿಲ್ಲವೆಂದು ಈ ರೀತಿ ತಿಳಿಸುವ ಕಾನೂನು ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದೇನೆ. ಎಲ್ಲರೂ ತಿಳಿಯಿರಿ.

**ಷೆಡ್ಯೂಲ್** : ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಕುಂದುವಾಡ ರಿ.ಸ.ನಂ 193/12, ವಿಸ್ತೀರ್ಣ: 00-30 ಗುಂಟೆ ಉಳ್ಳ ಜಮೀನಿನಲ್ಲಿ ದಾಖಲಾಗಿರುವ ಕುಂದುವಾಡ ವಿಭಾಗದ ಡೋರ್ ನಂ. 3651/4, ಅಳತೆ : 34.5x30 ಅಡಿವುಳ್ಳ ಖಾಲಿ ನಿವೇಶನ ಈ ಹಿಂದೆ ದಿನಾಂಕ: 22.04.2021ರಂದು ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಡಿವಿಜಿ-1-01517 -2021-22 ನಂಬರಾಗಿ ರಿಜಿಸ್ಟಾರ್ ಆಗಿರುವ ಸೈಟ್ ನಂ. 4 (ನಾಲ್ಕು), ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂಬರ್ 3651/4, ಮೀಟರ್‌ಗಳಲ್ಲಿ ಅಳತೆ ಪೂರ್ವ-ಪಶ್ಚಿಮ= 10.50 ಮೀಟರ್, ಉತ್ತರ-ದಕ್ಷಿಣ 9.14 ಮೀಟರ್ (10.50 x 9.14 ಮೀಟರ್ = 95.97 ಚದರ ಮೀಟರ್ ಇದ್ದು), ಅಡಿಗಳಲ್ಲಿ ಅಳತೆ: 34.5x30 ಅಡಿ ಉಳ್ಳ **ಖಾಲಿ ನಿವೇಶನಕ್ಕೆ ಚಕ್ಕುಬಂದಿ : ಪೂರ್ವಕ್ಕೆ: 9.00 ಮೀಟರ್ ಅಗಲದ ರಸ್ತೆ, ಪಶ್ಚಿಮಕ್ಕೆ: ರೀ ಸರ್ವೆ ನಂ. 193/8,9 ಮತ್ತು 10ರ ಪ್ರದೇಶ ಉತ್ತರಕ್ಕೆ: ಸೈಟ್ ನಂಬರ್ 3 ದಕ್ಷಿಣಕ್ಕೆ: ಸೈಟ್ ನಂಬರ್ 5 ಆಗಿರುತ್ತದೆ.**

**ಶ್ರೀ ಎನ್.ಡಿ. ಕೃಷ್ಣಮೂರ್ತಿ ಬಿನ್ ನವಲೆ ದೇವೇಂದ್ರಪ್ಪ**
ವಾಸ: 60/61, 3ನೇ ಮೇನ್,
13ನೇ ಕ್ರಾಸ್, ಯಲ್ಲಮ್ಮನಗರ,
ದಾವಣಗೆರೆ - 577 006
ಮೊ. : 9008527016, 9538657669

**ಇಂತಿ ತಮ್ಮ ವಿಶ್ವಾಸಿಗಳು**
**ಸಹಿ/- ಮಾಲೀಕರು**



## ಎವಿಕೆ ಕಾಲೇಜಿನಲ್ಲಿ ದೇಶೀ ಕಲರವ

ದಾವಣಗೆರೆ, ಜು.3- ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಬುಧವಾರ ದೇಶೀ ಕಲರವ ಗ್ರಾಮೀಣ ಸೊಗಡು ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಗ್ರಾಮೀಣ ಉಡುಗೆ ತೊಟ್ಟು ಸಂಭ್ರಮಿಸಿದರು. ಎವಿಕೆ ಕಾಲೇಜು ಪ್ರಾಂಶುಪಾಲರಾದ ಕಮಲಾ ಸೊಪ್ಪಿನ್ ಉತ್ಸವಕ್ಕೆ ಚಾಲನೆ ನೀಡಿದರು.

# ಮಗುವಿನ ಬೆಳವಣಿಗೆಯ ಹಂತದಲ್ಲಿ ಆದ್ಯತೆ ನೀಡಿ



## ಪೋಷಕರಿಗೆ ಎಸ್ಪಿ ಉಮಾ ಪ್ರಶಾಂತ್ ಕರೆ

ದಾವಣಗೆರೆ, ಜು.3- ಮಗುವಿನ ದೈಹಿಕ ಆರೋಗ್ಯ, ಭಾವನಾತ್ಮಕ, ಬೌದ್ಧಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಎಲ್ಲಾ ಹಂತದಲ್ಲಿ ಪೋಷಕರು ಆದ್ಯತೆ ನೀಡಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜು ಭಾನುವಳ್ಳಿಯಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಬಾಲ್ಯ ವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ಎಂ.ಟಿ.ಪಿ ಕಾಯ್ದೆ, ಪಿ.ಎನ್.ಡಿ.ಪಿ ಕಾಯ್ದೆ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

16 ರಿಂದ 18 ವರ್ಷ ವಯಸ್ಸಿನ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರೆ ಕನಿಷ್ಠ 10 ವರ್ಷಗಳ ಸೆರೆವಾಸ, ಜೀವಾವಧಿ ಶಿಕ್ಷೆ ಮತ್ತು ದಂಡ ವಿಸ್ತರಿಸಬಹುದು. 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರೆ ಕನಿಷ್ಠ 20 ವರ್ಷಗಳ ಸೆರೆವಾಸ, ಜೀವನದ ಉಳಿದ ಅವಧಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ ಮತ್ತು ಮಕ್ಕಳ ಮೇಲೆ ದೌರ್ಜನ್ಯ ಎಸಗಿದವರಿಗೆ ನ್ಯಾಯಾಲಯದಲ್ಲಿ ಜಾಮೀನು ದೊರೆಯುವುದಿಲ್ಲ. ದುಷ್ಕೃತ್ಯಕ್ಕೆ ನೇರವಾಗಿ ಹಾಗೂ ಪರೋಕ್ಷವಾಗಿ ಸಹಾಯ ಮಾಡಿದವರಿಗೂ ಈ ಕಾಯ್ದೆಯಡಿ ಶಿಕ್ಷೆ ಇದೆ ಎಂದು ಹೇಳಿದರು.

ಪ್ರೀತಿ, ಪ್ರೇಮವೆಂಬ ಆಕರ್ಷಣೆಗೆ ಒಳಗಾಗದೇ ಚನ್ನಾಗಿ ಓದಿ ಜೀವನದಲ್ಲಿ ಉತ್ತಮ ಸಾಧನೆ ಮಾಡಬೇಕು. ತಂದೆ-ತಾಯಿ ಕಂಡ ಕನಸುಗಳನ್ನು ನನಸು ಮಾಡಿ, ನಿಮ್ಮ ಭವಿಷ್ಯ ಉಜ್ವಲವಾಗಿ ರೂಪಿಸಿಕೊಳ್ಳಲು ಶ್ರಮಪಡಬೇಕು ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಮಾತನಾಡಿ, ಶಿಕ್ಷಣ ಇಲಾಖೆಯೊಂದಿಗೆ ಗ್ರಾಮ ಪಂಚಾಯಿತಿ ಮಟ್ಟದ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಕನಿಷ್ಠ ಇಬ್ಬರು ಸದಸ್ಯರು, ಮತ್ತು ಬೀಟ್ ಪೊಲೀಸರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮ ಲೆಕ್ಕಾಧಿಕಾರಿ, ಶಾಲೆ ಮುಖ್ಯೋಪಾಧ್ಯಾಯರು ಇವರನ್ನು ಒಳಗೊಂಡಂತೆ ಪೋಕ್ಸೋ ಕಾಯ್ದೆ ಮತ್ತು ಬಾಲ್ಯ ವಿವಾಹ ಕಾಯ್ದೆ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದರು.

ಆರ್.ಎಲ್. ಕಾನೂನು ಕಾಲೇಜು ವಿಶ್ರಾಂತ ಪ್ರಾಂಶುಪಾಲ ಡಾ.ಎಂ ಸೋಮಶೇಖರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತ ಟಿ.ಎನ್, ಹರಿಹರ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ರಾಮಕೃಷ್ಣ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪೂರ್ಣಿಮ.ಎಂ, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ, ಆರಕ್ಷಕ ವೃತ್ತ ನಿರೀಕ್ಷಕ ಸುರೇಶ್ ಸಗರಿ, ಹಿರಿಯ ವೈದ್ಯಾಧಿಕಾರಿ ಡಾ. ಪ್ರಶಾಂತ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ಮಣ್ಣೆತ್ತಿನ ಅಮಾವಾಸ್ಯೆ



ದಾವಣಗೆರೆ, ಜು. 3 - ನಗರದ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ, ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಮಣ್ಣೆತ್ತಿನ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 5ರ ಶುಕ್ರವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ.

ಕಣಕುಪ್ಪಿ ಮಂಜುಳ ದೇವರಾಜು ಮತ್ತು ಮಕ್ಕಳು, ವಿದ್ಯಾನಗರ ಪ್ರಸಾದದ ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898) ಬಿ.ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಸಣ್ಣ ಕೈಗಾರಿಕೆಗಳ ಸಂಘಕ್ಕೆ ಆಯ್ಕೆ



ದಾವಣಗೆರೆ, ಜು. 3- ಬೆಂಗಳೂರಿನಲ್ಲಿ ಈಚೆಗೆ ನಡೆದ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಚುನಾವಣೆಯಲ್ಲಿ ನೂತನವಾಗಿ ಮುಂದಿನ ಅಧ್ಯಕ್ಷರಾಗಿ ಎಂ.ಜಿ. ರಾಜಗೋಪಾಲ್, ಉಪಾಧ್ಯಕ್ಷರಾಗಿ ಗಣೇಶ್ ರಾವ್ ಆಯ್ಕೆಯಾಗಿದ್ದಾರೆ. ಕೌನ್ಸಿಲ್ ಸದಸ್ಯರುಗಳಾಗಿ ನಗರದ ಭೂಮಿಕಾ ಡಿಜಿಟಲ್ ಮಾಲೀಕ ಡಿ. ಸಿ. ಶ್ರೀನಿವಾಸ್ ಹಾಗೂ ಜನನಿ ಆಗ್ರೋ ಟೆಕ್ ಮಾಲೀಕ ಓ. ಮಹೇಶ್ವರಪ್ಪ ಇವರು ಚುನಾವಣೆಯಲ್ಲಿ ಜಯಶೀಲರಾಗಿ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ರಾಜ್ಯ ಕಮಿಟಿಗೆ ಆಯ್ಕೆಯಾಗಿರುತ್ತಾರೆ.

## 7 ರಂದು ಯಕ್ಷಗಾನ ಪ್ರದರ್ಶನ

ದಾವಣಗೆರೆ, ಜು.3- ಸವಿಡ್ಮೈನ್ ಮಹೇಶ್ ಶೆಟ್ಟಿ ಗೆಳೆಯರ ಬಳಗ ಮತ್ತು ಕರಾವಳಿ ಮಿತ್ರ ಮಂಡಳಿ ಇವರ ವತಿಯಿಂದ 'ಮಹಾಶಕ್ತಿ ವೀರಭದ್ರ' ಯಕ್ಷಗಾನ ಪ್ರದರ್ಶನವನ್ನು ಇದೇ ದಿನಾಂಕ 7 ರ ಭಾನುವಾರ ಸಂಜೆ 7ಕ್ಕೆ ನಗರದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಬಯಲು ರಂಗ ಮಂದಿರದಲ್ಲಿ ಆಯೋಜಿಸಲಾಗಿದೆ.

# ವೈದ್ಯ ಸಮೂಹಕ್ಕೆ ನಾಗರಿಕ ಸಮಾಜ ಋಣಿ

## ವೈದ್ಯರ ದಿನಾಚರಣೆ ಕಾರ್ಯಕ್ರಮದಲಿ ನ್ಯಾ|| ರಾಜೇಶ್ವರಿ ಎನ್. ಹೆಗಡೆ



ದಾವಣಗೆರೆ, ಜು. 3 - ಗುಣಪಡಿಸುವ ಕೈಗಳ, ಕಾಳಜಿಯುಳ್ಳ ಹೃದಯಗಳ ಅವಿಶ್ರಾಂತವಾಗಿ ಕಾರ್ಯನಿರ್ವಹಿಸುವ ವೈದ್ಯ ಸಮೂಹಕ್ಕೆ ಸಮಾಜ ಎಂದೆಂದಿಗೂ ಋಣಿಯಾಗಿರುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ನುಡಿದರು.

ಜಿಲ್ಲಾ ನ್ಯಾಯಾಂಗದಿಂದ ನಿನ್ನೆ ಆಯೋಜಿಸಲಾಗಿದ್ದ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಒತ್ತಡಮಯ ಜೀವನ ಶೈಲಿಗೆ ಮನುಷ್ಯರು ಹಲವಾರು ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾರೆ. ವೈದ್ಯ ಸಮೂಹದ ಮುಂದೆಯೂ ಸವಾಲುಗಳಿವೆ. ಕಾಲ ಕಾಲಕ್ಕೆ ವೈದ್ಯಕೀಯ ಲೋಕ ಸಂಬಂಧಿತ ವಿಷಯಗಳಿಗೆ ಸಂಬಂಧಪಟ್ಟಂತೆ ಚರ್ಚೆ, ಉಪನ್ಯಾಸಗಳ ಮೂಲಕ ಜನರನ್ನು ತಲುಪಬೇಕಿದೆ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಷಣ್ಮುಖಪ್ಪ ಮಾತನಾಡಿ, ನ್ಯಾಯಾಂಗದಿಂದ ವೈದ್ಯರನ್ನು ಕರೆಸಿ ಸನ್ಮಾನಿಸಿ ರುವುದು ನಮ್ಮಲ್ಲಿ ಮತ್ತಷ್ಟು ಜವಾಬ್ದಾರಿ ಹಾಗೂ ನೈತಿಕ ಪ್ರಜ್ಞೆ ಮೂಡಲು ಕಾರಣವಾಗಿದೆ ಎಂದರು.

ಇಂದಿನ ನಾಗರಿಕ ಸಮಾಜ ನಾಗಾಲೋಟದಿಂದ ಓಡುತ್ತಿದೆ. ಇಂತಹ ಸಂದರ್ಭದಲ್ಲಿ ಆಧುನಿಕ ಸಂಪರ್ಕ ಸಾಧನಗಳು ಜನರಲ್ಲಿ ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ತಪ್ಪು ಸಂದೇಶವನ್ನು ರವಾನಿಸುತ್ತಿ ರವುದು ದುರದೃಷ್ಟಕರ ಎಂದು ಸಮಾಜಮುಖಿ ಕಾರ್ಯಗಳಿಗೆ ಹೆಸರಾದ ಮತ್ತೋರ್ವ ವೈದ್ಯೆ ಡಾ.ಶಾಂತಾಭಟ್ ವಿಷಾದ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಂದ ಪ್ರಶಂಸೆಗೆ ಪಾತ್ರರಾಗಿ ಅನುಪಮ ಸೇವೆಗಾಗಿ ಪ್ರಶಸ್ತಿ ಪುರಸ್ಕೃತ ಡಾ. ರಾಘವನ್ ಮತ್ತು ಡಾ.ನಾಗೇಂದ್ರಪ್ಪನವರನ್ನು ಅಭಿನಂದಿಸಲಾಯಿತು.

ಸಮಾಜದಲ್ಲಿ ಸಾಂಕ್ರಾಮಿಕ, ಅಸಾಂಕ್ರಾಮಿಕ ರೋಗಗಳಿಗಿಂತಲೂ ಹೆಚ್ಚಾಗಿ ಇಂದಿನ ಬದಲಾದ ಜೀವನ ಶೈಲಿ, ಮಾನಸಿಕ ಒತ್ತಡಗಳಿಂದಾಗಿ ಮರಣ ಹೊಂದುವವರ ಸಂಖ್ಯೆ ಗಣನೀಯವಾಗಿದೆ. ಇದು ಪ್ರಸ್ತುತ ಶೇ.ಅರವತ್ತೇಳರ ಪ್ರಮಾಣದಲ್ಲಿದೆ. ಈ ಕುರಿತಂತೆ ಯುವ ಜನತೆಯಲ್ಲಿ ಅರಿವನ್ನು ಮೂಡಿಸುವ ಕಾರ್ಯವಾಗಬೇಕಿದೆ ಎಂದು ಡಾ.ರಾಘವನ್ ಹೇಳಿದರು.

ವೈದ್ಯರ ಮಾನವೀಯ ದೃಷ್ಟಿಯಿಂದಾಗಿಯೇ ಅರ್ಧದಷ್ಟು ಬಡವರ ಕಾಯಿಲೆಗಳು ವಾಸಿಯಾಗಬಲ್ಲವು. ಶ್ರೀಮಂತ ರೋಗಿಗೆ ಡಾಕ್ಟರ್ ಆಗಿ ಕಂಡ ಅದೇ ವೈದ್ಯ, ಬಡವನಿಗೆ ದೇವರಾಗಿ ಕಾಣಿಸುತ್ತಾನೆ ಇಂತಹ ಸ್ತುತ್ಯ ಕಾರ್ಯಕ್ಕೆ ವೈದ್ಯರನ್ನು ಅಭಿನಂದಿಸುತ್ತೇನೆ ಎಂದು ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಮಂಜಪ್ಪ ಅಣ್ಣಯ್ಯನವರ್ ನುಡಿದರು.

ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣನವರ ಸ್ವಾಗತಿಸಿದರು.

ವೈದ್ಯರಾದ ರೇಣುಕಾರಾಧ್ಯ, ಸುಭಾಷ್ಚಂದ್ರ, ನ್ಯಾಯಾಧೀಶರಾದ ಪ್ರವೀಣ್‌ಕುಮಾರ್, ಶ್ರೀರಾಮ ಹೆಗಡೆ, ಶಿವಪ್ಪ ಸಲಗರೆ, ನಿವೇದಿತಾ ಹಾಗೂ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿ ಬಿ.ಶ್ರೀನಿವಾಸ, ಕೋರ್ಟ್ ಮ್ಯಾನೇಜರ್ ಅಶ್ವಿನಿ ಕುಮಾರ್ ಹಾಗೂ ಇತರರು ಹಾಜರಿದ್ದರು.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ ಪೂಜೆ



ದಾವಣಗೆರೆ, ಜು. 3 - ನಗರದ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು 5ರ ಶುಕ್ರವಾರ ಮಣ್ಣೆತ್ತಿನ ಅಮಾವಾಸ್ಯೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಅಂದು ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀಮತಿ ಶ್ವೇತಾ ಮತ್ತು ಶ್ರೀ ಕೋರಿ ಸತೀಶ್ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಪಾಲಿಕೆ ನಿವೃತ್ತ ನೌಕರರಿಗೆ ಸನ್ಮಾನ



ದಾವಣಗೆರೆ, ಜು. 3- ಮಹಾನಗರ ಪಾಲಿಕೆಯಲ್ಲಿ ನೌಕರರಾಗಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿ ಮೊನ್ನೆ ನಿವೃತ್ತರಾಗಿರುವ ಹುಲುಗಮ್ಮ ಸೋಮಲಾಪುರ, ಸರೋಜಮ್ಮ ರಂಗಪ್ಪ, ಬಸವರಾಜ ಅವರನ್ನು ಪಾಲಿಕೆ ಸಭಾಂಗಣದಲ್ಲಿ ಮಹಾನಗರ ಪಾಲಿಕೆ ವತಿಯಿಂದ ಸನ್ಮಾನಿಸಲಾಯಿತು.

ನಿವೃತ್ತರನ್ನು ಸನ್ಮಾನಿಸಿ, ಗೌರವಿಸಿದ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ ಅವರು, ಜನರ ಆರೋಗ್ಯ ಕಾಪಾಡುವಲ್ಲಿ ಮತ್ತು ಕೊರೊನಾ ಸಂದರ್ಭದಲ್ಲಿ ಜೀವದ ಹಂಗು ತೊರೆದು ಜನರ ಪ್ರಾಣ ರಕ್ಷಣೆ ಮಾಡಿರುವ ಹುಲುಗಮ್ಮ, ಸರೋಜಮ್ಮ, ಬಸವರಾಜ ಅವರುಗಳ ಸೇವೆ ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ. ಎಸ್. ಗೋವಿಂದರಾಜ್, ಪೌರ ಕಾರ್ಮಿಕ ಸಂಘದ ಉಪಾಧ್ಯಕ್ಷ ಸಾಗರ್, ಮುಖಂಡ ಸೋಮಲಾಪುರದ ಹನುಮಂತಪ್ಪ, ಕಚೇರಿ ವ್ಯವಸ್ಥಾಪಕ ಬಸವರಾಜಯ್ಯ, ಕಚೇರಿ ಸಹಾಯಕ ಸುರೇಶ್ ಪಾಟೀಲ್, ಪ್ರಥಮ ದರ್ಜೆ ಸಹಾಯಕ ಹೆಚ್. ರಮೇಶ್, ಪಿ. ಪ್ರೀತಿ ಮತ್ತಿತರರು ಉಪಸ್ಥಿತರಿದ್ದರು.

# ಕೇಂದ್ರ ಸಂಪುಟದ ಸಮಿತಿಗಳ ರಚನೆ

ನವದೆಹಲಿ, ಜು. 3 - ಕೇಂದ್ರದ ಮೋದಿ ಸರ್ಕಾರ ಸಂಪುಟದ ಹಲವಾರು ಸಮಿತಿಗಳನ್ನು ರಚಿಸಿದೆ. ರಕ್ಷಣೆ, ಆರ್ಥಿಕ ಹಾಗೂ ರಾಜಕೀಯ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳಲ್ಲಿ ಬಿಜೆಪಿ ಹಾಗೂ ಎನ್.ಡಿ.ಎ. ಮಿತ್ರ ಪಕ್ಷಗಳಾದ ಜೆಡಿಯು, ತೆಲುಗು ದೇಶಂ ಪಾರ್ಟಿ, ಜೆಡಿಎಸ್, ಶಿವಸೇನೆ, ಲೋಕ ಜನಶಕ್ತಿ ಪಾರ್ಟಿ (ರಾಮ್ ವಿಲಾಸ್) ಮುಂತಾದ ಸದಸ್ಯರಿದ್ದಾರೆ.

ರಕ್ಷಣೆ ಕುರಿತ ಸಂಪುಟ ಸಮಿತಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಷಾ, ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಹಾಗೂ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರಿದ್ದಾರೆ.

ಆರ್ಥಿಕ ವ್ಯವಹಾರಗಳ ಸಮಿತಿಯಲ್ಲಿ ಪ್ರಧಾನಿ ಮೋದಿ ಅವರಲ್ಲದೆ ರಾಜನಾಥ್ ಸಿಂಗ್, ಅಮಿತ್ ಷಾ, ಸೀತಾರಾಮನ್, ಜೈಶಂಕರ್, ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಭಾರೀ ಕೈಗಾರಿಕಾ ಹಾಗೂ ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿದ್ದಾರೆ. ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರು ಸಮಿತಿಯ ಇತರೆ ಸದಸ್ಯರಾಗಿದ್ದಾರೆ. ರಾಜಕೀಯ ವ್ಯವಹಾರಗಳ ಸಮಿತಿಯಲ್ಲಿ ಮೋದಿ, ರಾಜನಾಥ್ ಸಿಂಗ್, ಅಮಿತ್ ಷಾ, ಗಡ್ಕರಿ, ಸೀತಾರಾಮನ್, ಜೆ.ಪಿ. ನಡ್ಡಾ, ರಾಮ್ ಮೋಹನ್ ನಾಯ್ಡು, ಜಿತನ್ ರಾಮ್ ಮಾಂಜಿ, ಭೂಪೇಂದ್ರ ಯಾದವ್, ಅನ್ನಪೂರ್ಣ ದೇವಿ, ಕಿರಣ್ ರಿಜಿಜು ಹಾಗೂ ಕಿಶನ್ ರೆಡ್ಡಿ ಅವರಿದ್ದಾರೆ

## ನೂತನ ನ್ಯಾಯ ಸಂಹಿತೆಯಲ್ಲಿ ಲಿಂಗ ತಟಸ್ಥ ಸೆಕ್ಷನ್‌ಗಳು

ನವದೆಹಲಿ, ಜು. 3 - ಕೇಂದ್ರ ಸರ್ಕಾರ ನೂತನವಾಗಿ ಜಾರಿಗೆ ತಂದಿರುವ ಭಾರತೀಯ ನ್ಯಾಯ ಸಂಹಿತೆ, ಲೈಂಗಿಕ ಅಪರಾಧಗಳನ್ನು ಲಿಂಗ ತಟಸ್ಥ ಗೊಳಿಸುತ್ತದೆ ಎಂದು ಅಧಿಕೃತ ದಾಖಲೆಗಳಲ್ಲಿ ತಿಳಿಸಲಾಗಿದೆ.

ಇದಕ್ಕಾಗಿ 366 ಐಪಿಸಿ ಸೆಕ್ಷನ್‌ನಲ್ಲಿದ್ದ ಅಪ್ರಾಪ್ತ ಬಾಲಕಿ ಎಂಬ ಪದವನ್ನು ಬದಲಿಸಿ ಅಲ್ಲಿ ಮಗು ಎಂದು ಬಳಸಲಾಗಿದೆ. ಬಿಎನ್‌ಎಸ್ ಕಾಯ್ದೆಯ 96ನೇ ಸೆಕ್ಷನ್‌ನಲ್ಲಿ ಈ ಅಂಶ ಸೇರಿಸಲಾಗಿದೆ. ಐಪಿಸಿಯ 366 ಡಿ ಸೆಕ್ಷನ್ ಅನ್ನು ಲಿಂಗ ತಟಸ್ಥಗೊಳಿಸಲಾಗಿದೆ. ಈ ಸೆಕ್ಷನ್‌ನಲ್ಲಿ ಹೆಣ್ಣು ಮಗುವನ್ನು ವಿದೇಶದಿಂದ ಕರೆಸಿಕೊಳ್ಳುವುದು ಎಂದಿತ್ತು. ಇದನ್ನು ಗಂಡು ಹಾಗೂ ಇಲ್ಲವೇ ಹೆಣ್ಣು ಮಗುವನ್ನು ಕರೆಸಿಕೊಳ್ಳುವುದು ಎಂದು ಬದಲಿಸಲಾಗಿದೆ

# ಮಣಿಪುರದಲ್ಲಿ ಹಿಸಾಚಾರ ಇಳಿಕೆ, ಶಿಕ್ಷಣ ಸಂಸ್ಥೆಗಳ ಆರಂಭ : ಮೋದಿ



ನವದೆಹಲಿ, ಜು. 3 - ಮಣಿಪುರದಲ್ಲಿ ಹಿಂಸಾಚಾರದ ಘಟನೆಗಳು ನಿರಂತರವಾಗಿ ಕಡಿಮೆಯಾಗುತ್ತಿವೆ ಹಾಗೂ ಶಿಕ್ಷಣ ಸಂಸ್ಥೆಗಳು ಮತ್ತು ಉದ್ಯಮಗಳು ರಾಜ್ಯದ ಬಹುತೇಕ ಭಾಗಗಳಲ್ಲಿ ಪುನರಾರಂಭಗೊಂಡಿವೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದರು. ರಾಜ್ಯದಲ್ಲಿ ಸಂಪೂರ್ಣ ಶಾಂತಿ ನೆಲೆಗೊಳ್ಳುವಂತೆ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಭರವಸೆ ನೀಡಿದರು.

ರಾಜ್ಯಸಭೆಯಲ್ಲಿ ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದ ಸಲ್ಲಿಸುವ ನಿಲುವಳಿ ಕುರಿತ ಚರ್ಚೆಯಲ್ಲಿ ಅವರು ಮಾತನಾಡಿದರು. ಸಾಮಾನ್ಯ ಪರಿಸ್ಥಿತಿ ನೆಲೆಗೊಳಿಸಲು ರಾಜ್ಯ ಸರ್ಕಾರದ ಜೊತೆ ಕೇಂದ್ರ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಹಿಂಸಾಚಾರ ಘಟನೆಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ 11,000 ಎಫ್.ಐ.ಆರ್.ಗಳನ್ನು ದಾಖಲಿಸಲಾಗಿದೆ ಹಾಗೂ 500ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಮಣಿಪುರದಲ್ಲಿ ಪ್ರವಾಹ ಪರಿಸ್ಥಿತಿಯೂ ಉಂಟಾಗಿದೆ. ಕೇಂದ್ರ ಸರ್ಕಾರ ಎನ್.ಡಿ.ಆರ್.ಎಫ್.ನ ಎರಡು ತಂಡಗಳನ್ನು ರಾಜ್ಯಕ್ಕೆ ಕಳಿಸಿದೆ ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದರು.

ರಾಜ್ಯಸಭೆಯ ಹಿಂದಿನ ಅಧಿವೇಶನದಲ್ಲಿ ಮಣಿಪುರಕ್ಕೆ ಸಂಬಂಧಿಸಿದಂತೆ ಸುದೀರ್ಘವಾಗಿ ಮಾತನಾಡಿದ್ದನ್ನು ನೆನಪಿಸಿದ ಮೋದಿ, ಮಣಿಪುರದಲ್ಲಿ ಸಾಮಾನ್ಯ ಪರಿಸ್ಥಿತಿ ನೆಲೆಗೊಳಿಸಲು ಸರ್ಕಾರ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಮಣಿಪುರದಲ್ಲಿ ಹಿಂಸಾಚಾರದ ಘಟನೆಗಳು ನಿರಂತರವಾಗಿ ಇಳಿಮುಖವಾಗುತ್ತಿವೆ ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ರಾಜ್ಯದಲ್ಲಿ ಶಾಂತಿ ನೆಲೆಗೊಳಿಸುವ ಸಾಧ್ಯತೆಯನ್ನು ಇದು ಸೂಚಿಸುತ್ತದೆ ಎಂದು ತಿಳಿಸಿದರು.

ಶಾಲಾ-ಕಾಲೇಜುಗಳು, ಕಚೇರಿಗಳು ಹಾಗೂ ಇತರೆ ಸಂಸ್ಥೆಗಳು ಮಣಿಪುರದಲ್ಲಿ ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಂಬಂಧಿಸಿದವರ ಎಲ್ಲರ ಜೊತೆ ಚರ್ಚೆ ನಡೆಸುತ್ತಿವೆ. ಮಣಿಪುರದಲ್ಲಿ ಶಾಂತಿ ನೆಲೆಗೊಳಿಸುವ ಪ್ರಯತ್ನದಲ್ಲಿ ಕೇಂದ್ರ ಗೃಹ ಸಚಿವರೇ ಮುಂಚೂಣಿಯಲ್ಲಿದ್ದಾರೆ. ಹಿರಿಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಇದಕ್ಕೂ ಮುಂಚೆ ಮಾತನಾಡಿದ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಹಾಗೂ ಇತರೆ ಸದಸ್ಯರು, ಪ್ರಧಾನಿ ಮಣಿಪುರಕ್ಕೆ ಭೇಟಿ ನೀಡಿಲ್ಲ ಎಂದು ಆಕ್ಷೇಪಿಸಿದ್ದರು.






KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas